ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 03 RNI Number : KNKAN/25/A2770 03-01-2026 Saturday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :03 ರಾಯಚೂರು 03-01-2026 ಶನಿವಾರ ಪುಟ 04 ಬೆಲೆ ರೂ.2/- ಮೊ:8660146563

ಬಳ್ಳಾರಿ ಗಲಭೆಯ ಬಗ್ಗೆ ತನಿಖೆಗೆ ಸೂಚನೆ ನೀಡಿದ್ದೇನೆ: ಸಿಎಂ



ಬೆಂಗಳೂರು,ಜ.02-

ಬಳ್ಳಾರಿ ಗಲಭೆ ಪ್ರಕರಣವನ್ನು ತನಿಖೆ ಮಾಡುವುದಕ್ಕೆ ಹೇಳಿದ್ದೇನೆ. ಯಾರ ಗನ್‌ನಿಂದ ಬುಲೆಟ್ ಬಂದಿದೆ ಅನ್ನೋದು ಗೊತ್ತಾಗಬೇಕಲ್ವಾ?. ಬಿಜೆಪಿಯವರ ಗನ್‌ನಿಂದಲೋ ಅಥವಾ ಕಾಂಗ್ರೆಸ್‌ನವರ ಗನ್‌ನಿಂದ ಬಂದಿದ್ಯಾ ಎನ್ನುವುದು ಗೊತ್ತಾಗಬೇಕು. ಅದಕ್ಕೋಸ್ಕರ ತನಿಖೆ ಮಾಡಲು ಹೇಳಿದ್ದೇನೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದ್ದಾರೆ.

ವಿಧಾನಸೌಧದಲ್ಲಿ ಇಂದು ಮಾಧ್ಯಮದವರೊಂದಿಗೆ ಅವರು ಮಾತನಾಡಿದರು.

ಖಾಸಗಿ ಬುಲೆಟ್ ಎಂದು ಎಸ್‌ಪಿ ಮಾಹಿತಿ ನೀಡಿರುವ ವಿಚಾರಕ್ಕೆ, ಅವರ ಸೆಕ್ಯುರಿಟಿಗಾಗಿ ಗನ್ ಇಟ್ಟುಕೊಂಡಿದ್ದಾರೆ. ಏರ್‌ನಲ್ಲಿ ಗನ್ ಫೈರ್ ಮಾಡಿದ್ದಾರೆ. ಫೈರ್ ಮಾಡಿರೋದು ಮನುಷ್ಯನಿಗೆ ತಗುಲಿದೆ. ರಾಜಶೇಖರ್ ಎಂಬವರು ಸತ್ತು ಹೋಗಿದ್ದಾರೆ ಎಂದು ಹೇಳಿದರು.

ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್ ಮಾತನಾಡಿ, ಬ್ಯಾನರ್ ಕಟ್ಟುವ ವಿಚಾರಕ್ಕೆ ಗಲಾಟೆ ಆಗಿದೆ. ಫೈರಿಂಗ್‌ನಲ್ಲಿ ನಮ್ಮ ಕಾರ್ಯಕರ್ತನ ಪ್ರಾಣ ಹೋಗಿದೆ. ಪೊಲೀಸರು ತನಿಖೆ ಮಾಡ್ತಿದ್ದಾರೆ. ಯಾರು ತಪ್ಪು ಮಾಡಿದ್ದಾರೋ ಅವರ ವಿರುದ್ಧ ಕ್ರಮ ಆಗುತ್ತದೆ. ರಾತ್ರಿ ಒಂದು ಗಂಟೆಗೆ ಪರಿಸ್ಥಿತಿ ತಹಬದಿಗೆ ಬಂದಿದೆ ಎಂದು ತಿಳಿಸಿದರು.

ನನ್ನ ಮೇಲೂ ಸಿಎಂ ರೇಗಿದ್ರು- ಸಚಿವ ಜಮೀ:ರ್ ನಾವು ಸಿಎಂಗೆ ಘಟನೆ ಬಗ್ಗೆ ಮಾಹಿತಿ ನೀಡಿದ್ದೇನೆ. ಸಿಎಂ ಕೂಡ ಬಹಳ ಸಿಟ್ಟು ಮಾಡಿಕೊಂಡಿದ್ದಾರೆ. ಸಣ್ಣ ಘಟನೆ ದೊಡ್ಡದಾಗಿದ್ದೇಕೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ನನ್ನ ಮೇಲೂ ಸಿಎಂ ರೇಗಿದ್ರು. ಇದು ಬೇಕಾಗಿರಲಿಲ್ಲ. ಆಗಿ ಹೋಗಿದೆ. ಪೊಲೀಸರು ತನಿಖೆ ಮಾಡಲಿ. ಸಂಜೆ ಕೋಗಿಲು ಪ್ರಕರಣ ಸಂಬಂಧ ಸಭೆ ಇದೆ. ಆ ಮೇಲೆ ನಾನು ಬಳ್ಳಾರಿಗೆ ಹೋಗ್ತೇನೆ. ಸಿಂಪತಿಗಾಗಿ ಬಿಜೆಪಿಯವರು ನೋಡ್ತಿದ್ದಾರೆ. ಅಮಾಯಕ ಯುವಕ ಪ್ರಾಣ ಕಳೆದುಕೊಂಡಿದ್ದಾನೆ. ಅವರ ಮನೆಯವರ ಗತಿ ಏನಾಗಬೇಕು ಎಂದು ಕೇಳಿದರು.

ಘಟನೆ ಕುರಿತು ಪ್ರತಿಕ್ರಿಯಿಸಿದ್ದ ಜನಾರ್ದನ ರೆಡ್ಡಿ, ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ, ಅವರ ಆಪ್ತ ಸತೀಶ್ ರೆಡ್ಡಿ ಹಾಗೂ ಭರತ್ ರೆಡ್ಡಿ ತಂದೆ ನಾರಾ ಸೂರ್ಯನಾರಾಯಣ ರೆಡ್ಡಿ ನನ್ನ ಹತ್ಯೆಗೆ ಸಂಚು ನಡೆಸಿದ್ದಾರೆ. ಬ್ಯಾನರ್ ಗಲಾಟೆ ನೆಪದಲ್ಲಿ ನಮ್ಮ ನಿವಾಸದ ಮುಂದೆ ಗನ್ ಮ್ಯಾನ್‌ಗಳಿಂದ ಗುಂಡಿನ ದಾಳಿ ನಡೆಸಿದ್ದಾರೆ. ಗಂಗಾವತಿಯಿಂದ ಕಾರಿನಲ್ಲಿ ಬಂದು ಇಳಿಯುತ್ತಿದ್ದಂತೆ ಗನ್‌ಮ್ಯಾನ್‌ಗಳು ಫೈರಿಂಗ್ ಮಾಡಿದರು ಎಂದು ಹೇಳಿದ್ದರು.

ಗುಂಡು ತಗುಲಿ ಕಾಂಗ್ರೆಸ್ ಕಾರ್ಯಕರ್ತ ರಾಜಶೇಖರ್ ಮೃತಪಟ್ಟಿದ್ದಾರೆ. ಜನಾರ್ದನ ರೆಡ್ಡಿ ಅವರ ಬೆಂಬಲಿಗರ ಕಡೆಯಿಂದ ದಾಳಿ ನಡೆದಿದೆ' ಎಂದು ಬಳ್ಳಾರಿಯಲ್ಲಿಂದು ಕಾಂಗ್ರೆಸ್ ಶಾಸಕ ಭರತ್ ರೆಡ್ಡಿ ಆರೋಪಿಸಿದ್ದಾರೆ.

ಭರತ್ ರೆಡ್ಡಿ ಏನು ಓದಿದ್ದಾನೆ ಎಂಬುದಲ್ಲ ನಡವಳಿಕೆ ಮುಖ್ಯ ಜೀವ ರಕ್ಷಣೆಗೆಂದು ದೂರು ಕೊಡುವೆ; ಜನಾರ್ಧನರೆಡ್ಡಿ



ಬಳ್ಳಾರಿ, ಜ.02: ಮಾಜಿ ಸಚಿವ, ಗಂಗಾವತಿ ಶಾಸಕ ಜನಾರ್ಧನರೆಡ್ಡಿ ನಿನ್ನೆ ಘಟನೆ ಬಗ್ಗೆ ಮಾಧ್ಯಮಗಳ ಜೊತೆ ಮಾತನಾಡಿ, ಶಾಸಕ ಭರತ್ ರೆಡ್ಡಿ ಬಗ್ಗೆ ಏಕವಚನದಲ್ಲಿ ಮಾತನಾಡಿ ನಾರಾ ಭರತ್ ರೆಡ್ಡಿ ಹೇಳಿಕೆ ಗಮನಿಸಿರುವೆ. ಆತ ತಾಳ್ಮೆಯಿಂದ ಇದ್ದಿದ್ದಾನಂತೆ ಇಲ್ಲದಿದ್ದರೆ ನಮ್ಮ ಮನೆ, ಬಳ್ಳಾರಿ ಸುಟ್ಟು ಭಸ್ಮ ಮಾಡುತ್ತಿದ್ದನಂತೆ. ಏನು ಓದಿದ್ದಿ ಎನ್ನುವುದು ಮುಖ್ಯ ಅಲ್ಲ, ಅವರ ನಡೆ ನುಡಿ ಸಂಸ್ಕೃತಿ ತೋರಿಸುತ್ತೆ.

ಭರತ್ ರೆಡ್ಡಿ ಓರ್ವ ಮೂರ್ಖ, ಅವನ ಸಂಸ್ಕೃತಿ ಏನೆಂದು ತೋರಿಸುತ್ತೆ. ಶಾಸಕನಾಗಿ ಡೆವಲಪ್ ಮೆಂಟ್ ಮಾಡಲಿಲ್ಲ. ಕೆಎಂಇಆರ್ ಸಿ ಹಣ ಬಳಿಸಿಕೊಳ್ಳಲಿಲ್ಲ ಶಾಸಕನಾಗಿ ವಿಫಲನಾಗಿದ್ದಾನೆಂದರು.

ವಾಲ್ಮೀಕಿ ಮೂರ್ತಿ, ಭವನ ಈಗಾಗಲೇ ಇದ್ದರೂ, ಮತ್ತೊಂದು ವಾಲ್ಮೀಕಿ ಪ್ರತಿಮೆ ಮಾಡಲು ಹೋಗಿ ಗಲಾಟೆ ಮಾಡಲು ಮುಂದಾಗಿದ್ದಾರೆ.

ಅಡ್ಡಾದಿಡ್ಡಿಯಾಗಿ ಹಣ ಮಾಡಲು ಭರತ್ ರೆಡ್ಡಿ ವಾರ್ಡ್ ವಾರ್ಡಿಗೆ ಎರೆಡು ಮಟಕಾ ಗುಂಪು ಮಾಡಿದ್ದಾರೆ. ಗಾಂಜಾ ಮಾರಾಟ ಮಾಡಿಸುತ್ತಿದ್ದಾರೆ. ಅಕ್ರಮ ಮರಳು ಸಾಗಾಣಿಕೆ, ಲೇಔಟ್ ಅಪ್ರೂಲ್ ಗೆ 20 ಲಕ್ಷ ಲಂಚ ಕೊಡಬೇಕು. ಹೀಗೆ ಬಳ್ಳಾರಿಯನ್ನು ಹಾಳು ಮಾಡಿದ್ದಾರೆ. ನನ್ನನ್ನು ಎದುರಿಸಿದರೆ ನಗರವೆಲ್ಲ ಭಯಭೀತರಾಗಿ ತನ್ನ ವಸೂಲಿ ಹೆಚ್ಚಿಸಿಕೊಳ್ಳುವ ಪ್ರಯತ್ನ ಎಂದು ಜನಾರ್ಧನರೆಡ್ಡಿ ಆರೋಪಿಸಿದರು.

ಖಾಸಗಿ ವ್ಯಕ್ತಿಯ ಗನ್ ಮ್ಯಾನ್ ಬುಲೆಟ್ ಎಂದು ಚಿತ್ರದುರ್ಗದ ಎಸ್ಪಿ ರಂಜಿತ್ ಕುಮಾರ್ ಬಳ್ಳಾರಿಯಲ್ಲಿ ಹೇಳಿದ್ದಾರೆ.

ಜ.4ರಂದು ಮಹಿಳಾ ಪರಿಷತ್ ಉದ್ಘಾಟನೆ



ರಾಯಚೂರು,ಜ.02-

ಕಲ್ಯಾಣ ಕರ್ನಾಟಕ ಭಾಗದಲ್ಲಿ ಮಹಿಳೆಯರ ಸಾಹಿತ್ಯಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಸಬಲೀಕರಣಕ್ಕೆ ವೇದಿಕೆ ಒದಗಿಸುವ ಉದ್ದೇಶದಿಂದ ಸ್ಥಾಪಿಸಲಾದ ಮಹಿಳಾ ಪರಿಷತ್ ಸಂಸ್ಥೆಯ ಉದ್ಘಾಟನೆ, ಸಾಹಿತ್ಯ-ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಜನವರಿ 4ರ ಭಾನುವಾರ ನಗರದ ಕನ್ನಡ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಸಂಸ್ಥಾಪಕರಾದ ಅಣ್ಣಪ್ಪ ಮೇಟಿಗೌಡ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಪ್ರದೇಶದಲ್ಲಿ ಮಹಿಳೆಯರಿಗಾಗಿ ಸಮಗ್ರವಾಗಿ ಕಾರ್ಯನಿರ್ವಹಿಸುವ ಸಂಸ್ಥೆಗಳ ಕೊರತೆ ಇದೆ. ಮಹಿಳೆಯರಿಂದ, ಮಹಿಳೆಯರಿಗಾಗಿ, ಮಹಿಳೆಯರೇ ಮುನ್ನಡೆಸುವ ಸಂಸ್ಥೆಯಾಗಿ ಮಹಿಳಾ ಪರಿಷತ್ ಕಾರ್ಯನಿರ್ವಹಿಸಲಿದೆ. ರಾಯಚೂರು ಜಿಲ್ಲೆಗೆ ಸೀಮಿತವಾಗದೆ ಇತರ ಜಿಲ್ಲೆಗಳಲ್ಲಿಯೂ ಸಂಸ್ಥೆಯನ್ನು ವಿಸ್ತರಿಸುವ ಗುರಿಯಿದೆ ಎಂದರು.

ಕಾರ್ಯಕ್ರಮವನ್ನು ಹಿರಿಯ ಸಾಹಿತಿಗಳಾದ ಡಾ. ಜಯಲಕ್ಷ್ಮೀ ಮಂಗಳಮೂರ್ತಿ ಉದ್ಘಾಟಿಸಲಿದ್ದು, ಸಂಸ್ಥಾಪಕ ರಾಜ್ಯಾಧ್ಯಕ್ಷರಾದ ಡಾ. ಸರ್ವಮಂಗಳ ಸಕ್ರಿ ಅಧ್ಯಕ್ಷತೆ ವಹಿಸಲಿದ್ದಾರೆ. ಪ್ರಸ್ತಾವಿಕ ಭಾಷಣವನ್ನು ಸಂಸ್ಥಾಪಕ ಅಧ್ಯಕ್ಷ ಅಣ್ಣಪ್ಪ ಮೇಟಿಗೌಡ ಮಾಡಲಿದ್ದು, ಸ್ವಾಗತವನ್ನು ಜಿಲ್ಲಾಧ್ಯಕ್ಷರಾದ ಬಸ್ಸಮ್ಮ ಹಿರೇಮಠ ನೆರವೇರಿಸಲಿದ್ದಾರೆ.

ಶಾಸಕರಾದ ಡಾ. ಶಿವರಾಜ್ ಎಸ್. ಪಾಟೀಲ್, ಬಸನಗೌಡ ದದ್ದಲ್ ಹಾಗೂ ತಹಶೀಲ್ದಾರ್‌ಸುರೇಶ್ ವರ್ಮಾ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಕಾರ್ಯಕ್ರಮದಲ್ಲಿ ಶಾಸಕರಾದ

3ನೇ ಪುಟಕ್ಕೆ

ಪ್ರಾಣಿಬಲಿ ತಡೆ ಜಾಗೃತಿಗಾಗಿ ಅಹಿಂಸಾ-ಪ್ರಾಣಿದಯಾ ಸಂದೇಶ ಯಾತ್ರೆ

ಜಾತ್ರಾ ಪರಿಸರವನ್ನು ರಕ್ತಮುಕ್ತವಾಗಿ ರೂಪಿಸಬೇಕು



ರಾಯಚೂರು,ಜ.02-

ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಸೋಮಲಾಪುರದಲ್ಲಿರುವ ಶ್ರೀ ಸಿದ್ದಪರ್ವತದ ಶ್ರೀ ಅಂಬಾದೇವಿ ದೇವಸ್ಥಾನ (ಅಂಬಾ ಮಠ) ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಯಾವುದೇ ರೀತಿಯ ಪ್ರಾಣಿಬಲಿ ನಡೆಯದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ವಿಶ್ವ ಪ್ರಾಣಿ ಕಲ್ಯಾಣ ಮಂಡಳಿ ಅಧ್ಯಕ್ಷರು ಹಾಗೂ ಪಶು-ಪ್ರಾಣಿ ಬಲಿ ನಿರ್ಮೂಲನಾ ಜಾಗೃತ ಮಹಾ ಸಂಘ ಮತ್ತು ಬಸವ ಧರ್ಮ ಜ್ಞಾನ ಪೀಠದ ಅಧ್ಯಕ್ಷರಾದ ಬೆಂಗಳೂರು ನಿವಾಸಿ ಶ್ರೀ ದಯಾನಂದ ಸ್ವಾಮೀಜಿ ಅವರು ಆಗ್ರಹಿಸಿದರು.

ನಗರದ ಪತ್ರಿಕಾ ಭವನದಲ್ಲಿ ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಿ.03-01-2026 ರಿಂದ 07-01-2026ರವರೆಗೆ ನಡೆಯಲಿರುವ ಜಾತ್ರೆಯ ವೇಳೆ ದೇವಾಲಯದ ವ'ಂಂಂಭಾಗ'-ಹಿಂಭಾಗ', ಸುತ್ತಮುತ್ತಲಿನ ಪಲಸದಗಳು, ರಸ್ತೆ ಬದಿಗಳು, ಹೊಲ-ಗದ್ದೆಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ಪ್ರಾಣಿಬಲಿ, ಪ್ರಾಣಿ ಅಂಗಾಂಗಗಳ ನೈವೇದ್ಯ ಸಲ್ಲಿಕೆ ಅಥವಾ ಪ್ರದರ್ಶನ ನಡೆಯದಂತೆ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

1959ರ ಕರ್ನಾಟಕ ಪ್ರಾಣಿ ಬಲಿಗಳ ಪ್ರತಿಬಂಧಕ ಅಧಿನಿಯಮ, 1963ರ ನಿಯಮಗಳು ಹಾಗೂ 1975ರ ತಿದ್ದುಪಡಿ ಕಾಯ್ದೆ ಮತ್ತು ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಪ್ರಾಣಿಬಲಿಯನ್ನು ಸಂಪೂರ್ಣವಾಗಿ ನಿಲ್ಲಿಸಿ ಜಾತ್ರೆಯನ್ನು ಪ್ರಾಣಿಬಲಿ ಮುಕ್ತ, ರಕ್ತಮುಕ್ತ ಹಾಗೂ ಜೀವಹಿಂಸಾ ಮುಕ್ತವಾಗಿಸಲು ಜಿಲ್ಲಾಡಳಿತ, ತಾಲೂಕಾಡಳಿತ ಮತ್ತು ಪೊಲೀಸ್ ಇಲಾಖೆ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು ಎಂದು ಹೇಳಿದರು.

ಈ ಕುರಿತು ಈಗಾಗಲೇ ಮಾನ್ಯ ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಪಶು ಸಂಗೋಪನಾ ಉಪನಿರ್ದೇಶಕರು, ಸಿಂಧನೂರು ಉಪವಿಭಾಗದ ಡಿವೈಎಸ್ಪಿ, ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿಯಾಗಿರುವ ತಹಶೀಲ್ದಾರರು, ಸಿಪಿಐ ಹಾಗೂ

3ನೇ ಪುಟಕ್ಕೆ

ನರೇಗಾ ಕೂಲಿಕಾರರೊಂದಿಗೆ ಹೊಸ ವರ್ಷಾಚರಣೆ: ಕೇಕ್ ಕತ್ತರಿಸಿ ಸಿಹಿ ತಿನ್ನಿಸಿ ಶುಭಾಶಯ



ಸಿರವಾರ.ಜ.2-

ತಾಲೂಕಿನ ಹೀರೆಹಣಗಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಗೊಲ್ಲದಿನ್ನಿ ಗ್ರಾಮದಲ್ಲಿ ನರೇಗಾ ಯೋಜನೆಯಡಿ ನಾಲಾ ಹೊಳೆತ್ತುವ ಕಾಮಗಾರಿ ಸ್ಥಳದಲ್ಲಿ ಕೂಲಿಕಾರರೊಂದಿಗೆ ಕೇಕ್ ಕತ್ತರಿಸಿ ಸಿಹಿ ಹಂಚಿ 2026 ಹೊಸ ವರ್ಷಾಚರಣೆಯನ್ನು ಸಂಭ್ರಮದಿಂದ ಆಚರಣೆ ಮಾಡಲಾಯಿತು.

ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳಾದ ಶಶೀರ್ಧ ಸ್ವಾಮಿ ಅವರು ಮಾತನಾಡಿ, ಕೂಲಿಕಾರರಿಗೆ ನಿಗದಿಪಡಿಸಿದ ಕೆಲಸವನ್ನು ಚೆನ್ನಾಗಿ ಮಾಡಬೇಕು. ಈ ವರ್ಷ ಎಲ್ಲಾ ಕೂಲಿಕಾರರಿಗೆ ಒಳ್ಳೆತನ ಲಭಿಸಲಿವೆಂದು ಹಾರೈಸಿದರು.

ನರೇಗಾ ಸಹಾಯಕ ನಿರ್ದೇಶಕರಾದ ಮಂಜುನಾಥ ಜಾವೂರ್ ಮಾತನಾಡಿ, ಎನ್.ಎಂ.ಆರ್ ನಲ್ಲಿ ಇರುವವರು

3ನೇ ಪುಟಕ್ಕೆ

ಉದ್ಬಾಳ (ಯು) ಗ್ರಾಮದ ಶ್ರೀ ಅಂಬಾದೇವಿ ಪುರಾಣ,ಕಳಸ ಮೆರವಣಿಗೆಗೆ ನಿಷೇಧ ಆದೇಶ ತೆರವು

ರಾಯಚೂರು ಜನವರಿ 02

ರಾಯಚೂರು ಜಿಲ್ಲೆಯ ಮಸ್ಕಿ ತಾಲ್ಲೂಕಿನ ಉದ್ಬಾಳ (ಯು) ಗ್ರಾಮದಲ್ಲಿ 3-1-2026ರಂದು ಜರುಗುವ ಶ್ರೀಅಂಬಾದೇವಿ ಪುರಾಣ ಮತ್ತು ಕಳಸ ಮೆರವಣಿಯನ್ನು ಸಾರ್ವಜನಿಕವಾಗಿ ಆಚರಿಸುವುದು ಹಾಗೂ ಮರವಣಿಗೆ ಮಾಡುವದನ್ನು ನಿಷೇಧಿಸಿರುವ ಆದೇಶವನ್ನು ಹಿಂಪಡೆಯಲಾಗಿದೆ ಎಂದು ಜಿಲ್ಲಾ ದಂಡಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ತಿಳಿಸಿದ್ದಾರೆ.

ಮಸ್ಕಿ ತಹಶೀಲ್ದಾರರು ದಿನಾಂಕ 31-12-2025 ರಂದು ಖುದ್ದಾಗಿ ಹಾಗೂ ಬಳಗಾನೂರು ಪಿ.ಎಸ್.ಐ. ಅವರೊಂದಿಗೆ ಬಳಗಾನೂರು ಠಾಣಾ ವ್ಯಾಪ್ತಿಯ ಉದ್ಬಾಳ ಗ್ರಾಮಕ್ಕೆ ತೆರಳಿ ಗ್ರಾಮದ ಹಿರಿಯ ಮುಖಂಡರು ಹಾಗೂ ಜನಗಳೊಂದಿಗೆ ಶಾಂತಿ ಸಭೆ ನಡೆಸಿ ಶ್ರೀ ಅಂಬಾದೇವಿ ಪುರಾಣ ಹಾಗೂ ಕಳಸ ಮರವಣಿಗೆ ಜರುಗುವ ಸಂದರ್ಭದಲ್ಲಿ ಯಾವುದೇ ಗಲಾಟೆಯಾಗದಂತೆ ಹಾಗೂ ಶಾಂತಿ ಸುವ್ಯವಸ್ಥೆ ಕಾಪಾಡುವಂತೆ ತಿಳಿ ಹೇಳಿದ್ದಾರೆ. ಜನ ಪ್ರತಿನಿಧಿಗಳ ಸಮ್ಮುಖದಲ್ಲಿ ಗ್ರಾಮದಲ್ಲಿನ ನಾನಾ ಪಕ್ಷಗಳ ಕಾರ್ಯಕರ್ತರಿಗೆ ಮನವೊಲಿಸಿ ಮುಖಂಡರಿಗೆ ಸದ್ವರ್ತನೆಯಿಂದಿರುವತೆ ಸೂಚಿಸಿದ್ದಾರೆ. ಉದ್ಬಾಳ (ಯು) ಗ್ರಾಮಸ್ಥರಿಂದ ಒಪ್ಪಿಗೆ ಪ್ರಮಾಣ ಪತ್ರವನ್ನು ಬರೆಸಿಕೊಳ್ಳಲಾಗಿದೆ. ಶಾಂತಿ ಒಪ್ಪಂದ ನಡೆಸಿ ಇಬ್ಬರ ಕಡೆಯಿಂದಲೂ ಒಪ್ಪಿತ ರೀತಿಯಲ್ಲಿ ಜಾತ್ರಾ ಮಹೋತ್ಸ ವ ನಡೆಸುವಂತೆ ಊರಿನ ಮುಖಂಡರ ಸಮ್ಮುಖದಲ್ಲಿ ಸಂಧಾನ

3ನೇ ಪುಟಕ್ಕೆ

ಜ.4 ಕ್ಕೆ ಸಿರವಾರ ಸರ್ಕಾರಿ ಪ್ರೌಢಶಾಲೆಯಲ್ಲಿ 60 ರ ಸಂಭ್ರಮ, ಐತಿಹಾಸಿಕ ಸಮಾರಂಭಕ್ಕೆ ಭರದ ಸಿದ್ದತೆ..!



ಸಿರವಾರ,ಜ.2 -

ಪಟ್ಟಣದ ಸರಕಾರಿ ಪ್ರೌಢಶಾಲೆಯಲ್ಲಿ 1995-96 ನೇ ಸಾಲಿ ನಿಂದ 2024-25 ರ ಸಾಲಿನ ವರೆಗೆ ಓದಿರುವ ಎಲ್ಲಾ ವಿದ್ಯಾರ್ಥಿಗಳು, ಸಹಪಾಠಿಗಳ ಸಮಿತಿಯ ವತಿಯಿಂದ ಜ.4 ರಂದು ಹಮ್ಮಿಕೊಂಡಿರುವ 'ಐತಿಹಾಸಿಕ ಶಾಲಾ 60ರ ವಾರ್ಷಿಕೋತ್ಸವ ಹಾಗೂ ಗುರುವಂದನಾ ಸಮಾರಂಭದ ಸಿದ್ದತೆಗಳು ಭರದಿಂದ ಸಾಗಿವೆ.

ಗುರುಗಳಿಗೆ ಅದ್ದೂರಿ ಹಾಗೂ ವಿಶಿಷ್ಟ ಗುರುವಂದನಾ ಕಾರ್ಯಕ್ರಮವು 60 ವರ್ಷಗಳ ಇತಿಹಾಸ ಹೊಂದಿರುವ ಈ ಶಾಲೆಯಲ್ಲಿ ಮೊದಲ ಕಾರ್ಯಕ್ರಮ ನಡೆಯುತ್ತಿದೆ. ಹೀಗಾಗಿ ಗುರುವಂದನಾ ಕಾರ್ಯಕ್ರಮದ ಐತಿಹಾಸಿಕ ಕ್ಷಣಗಳಿಗೆ ಸಿರವಾರ ಪಟ್ಟಣ ಹಾಗೂ ಹಳೆಯ ವಿದ್ಯಾರ್ಥಿಗಳು ಸಾಕ್ಷಿಯಾಗಲಿದ್ದಾರೆ.

3ನೇ ಪುಟಕ್ಕೆ

ಅರುಣಾಂಶು ಗಿರಿ ಅವರು ರಾಯಚೂರು ಜಿಲ್ಲೆಯ ನೂತನ ಪೊಲೀಸ್ ವರಿಷ್ಠಾಧಿಕಾರಿಯಾಗಿ ನೇಮಕ



ರಾಯಚೂರು,ಜ.02-

ಸಿಐಡಿ ಎಸ್‌ಪಿ ಆಗಿದ್ದ ಅರುಣಾಂಶು ಗಿರಿ ಅವರು ರಾಯಚೂರು ಜಿಲ್ಲೆಯ ನೂತನ ಪೊಲೀಸ್ ವರಿಷ್ಠಾಧಿಕಾರಿಯಾಗಿ ನೇಮಕಗೊಂಡಿದ್ದಾರೆ. ಸಿಐಡಿ ಎಸ್‌ಪಿ ಹುದ್ದೆಯಿಂದ ರಾಯಚೂರಿಗೆ ಅವರನ್ನು ವರ್ಗಾವಣೆ ಮಾಡಲಾಗಿದೆ.

2015ರ ಬ್ಯಾಚ್‌ನ ಐಪಿಎಸ್ ಅಧಿಕಾರಿಯಾಗಿರುವ ಅರುಣಾಂಶು ಗಿರಿ ಅವರು ಬಿಇ ಹಾಗೂ ಎಂಬಿಎ ಪದವೀಧರರಾಗಿದ್ದು, ಪಶ್ಚಿಮ ಬಂಗಾಳ ಮೂಲದವರಾಗಿದ್ದಾರೆ. ಇವರು ಹಿಂದೆ ಮಂಗಳೂರು ನಗರದಲ್ಲಿ ಡಿಸಿಪಿ (ಕಾನೂನು ಮತ್ತು ಸುವ್ಯವಸ್ಥೆ) ಆಗಿ ಸೇವೆ ಸಲ್ಲಿಸಿದ್ದು, ಕೊಪ್ಪಳ ಜಿಲ್ಲಾ ಪೊಲೀಸ್ ವರಿಷ್ಠಾಧಿ

3ನೇ ಪುಟಕ್ಕೆ

ರಾಯಚೂರು: ಎಲ್.ಬಿ.ಎಸ್ ನಗರದಲ್ಲಿ ಕುಡಿಯುವ ನೀರಿನ ತೀವ್ರ ಸಮಸ್ಯೆ - ಪೈಪ್‌ಲೈನ್ ಅಳವಡಿಕೆಗೆ ನಿವಾಸಿಗಳ ಆಗ್ರಹ



ರಾಯಚೂರು,ಜ.02-

ನಗರದ ವಾರ್ಡ್ ನಂ. 29ರ ಎಲ್.ಬಿ.ಎಸ್ ನಗರದಲ್ಲಿ ಕುಡಿಯುವ ನೀರಿನ ತೀವ್ರ ಸಮಸ್ಯೆ ಎದುರಾಗಿದೆ. ಸಿದ್ದಪ್ಪ ಹೋಟೆಲ್ ಸುತ್ತಮುತ್ತಲಿನ ಓಣಿಗಳ ನಿವಾಸಿಗಳು ದಿನನಿತ್ಯ ಕುಡಿಯುವ ನೀರಿಗಾಗಿ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಅಲ್ಲಂಪ್ರಭು ಕಾಲೋನಿಯಿಂದ ಹಳೆ ಸರ್ಕಾರಿ ಆಸ್ಪತ್ರೆಗೆ ಹೋಗುವ 60 ಅಡಿ ರಸ್ತೆಯಲ್ಲಿ ಈಗಾಗಲೇ 6 ಇಂಚಿನ ಮುಖ್ಯ ಕುಡಿಯುವ ನೀರಿನ ಪೈಪ್‌ಲೈನ್ ಹಾದುಹೋಗಿದೆ. ಆದರೆ, ಸದರಿ ಪೈಪ್‌ಲೈನ್‌ನಿಂದ ಶ್ರೀ ಲಕ್ಷ್ಮಿರೆಡ್ಡಿ ಅವರ ಮನೆ ಮುಂಭಾಗದಿಂದ ಬಸವರಾಜ ಅವರ ಮನೆವರೆಗೆ ಅಗತ್ಯವಿರುವ ಹೊಸ ಸಂಪರ್ಕ ಕಲ್ಪಿಸದ ಕಾರಣ ಸಿದ್ದಪ್ಪ ಹೋಟೆಲ್ ಬಡಾವಣೆಯ ನಿವಾಸಿಗಳಿಗೆ ಸಮರ್ಪಕವಾಗಿ ನೀರು ಪೂರೈಕೆ ಆಗುತ್ತಿಲ್ಲ.

ಈ ಪ್ರದೇಶದಲ್ಲಿ ಹೊಸದಾಗಿ ಪೈಪ್‌ಲೈನ್ ಸಂಪರ್ಕ ಕಲ್ಪಿಸಿದಲ್ಲಿ ನೂರಾರು ಕುಟುಂಬಗಳಿಗೆ ಸಮರ್ಪಕ ಹಾಗೂ ನಿಯಮಿತ ಕುಡಿಯುವ ನೀರಿನ ವ್ಯವಸ್ಥೆ ಲಭ್ಯವಾಗಲಿದೆ. ಪ್ರಸ್ತುತ ಪರಿಸ್ಥಿತಿಯಲ್ಲಿ ಮಹಿಳೆಯರು, ಮಕ್ಕಳು ಹಾಗೂ ವೃದ್ಧರು ಹೆಚ್ಚು ತೊಂದರೆ ಅನುಭವಿಸುತ್ತಿದ್ದಾರೆ.

ಆದ್ದರಿಂದ ಸಾರ್ವಜನಿಕರ

3ನೇ ಪುಟಕ್ಕೆ

ರಾಯಚೂರಿನ ಪತಂಗೆ ಜಯವಂತರಾವ್ ಅವರಿಗೆ ಉತ್ತಮ ಸಹಕಾರಿ ಪ್ರಶಸ್ತಿ ಪ್ರದಾನ



ರಾಯಚೂರು ಜನವರಿ 02

ಕಲ್ಯಾಣ ಕರ್ನಾಟಕ ಭಾಗದ ಉತ್ತಮ ಸಹಕಾರ ಧುರೀಣರು ಹಾಗೂ ರಾಯಚೂರು ಒಕ್ಕಲುತನ ಹುಟ್ಟುವಳಿ ಹಾಗೂ ಸಂಸ್ಕರಣ ಸಹಕಾರ ಸಂಘದ ಅಧ್ಯಕ್ಷರಾದ ಪತಂಗೆ ಜಯವಂತರಾವ್ ಅವರಿಗೆ, ಬೆಂಗಳೂರಿನ ಜಿಕೆವಿಕೆ ಆವರಣದಲ್ಲಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಅಂತಾರಾಷ್ಟ್ರೀಯ ಸಮ್ಮೇಳನ ಕೇಂದ್ರದಲ್ಲಿ ಇತ್ತೀಚೆಗೆ ನಡೆದ ಬೃಹತ್ ಸಹಕಾರಿ ಮತ್ತು ರೈತ ಸಮಾವೇಶದಲ್ಲಿ ಇಫ್ಕೊ ಅಧ್ಯಕ್ಷ ದಿಲೀಪ್ ಸಂಘಾನಿ ಹಾಗೂ ವ್ಯವಸ್ಥಾಪಕ ನಿರ್ದೇಶಕ ಕೆ.ಜೆ. ಪಟೇಲ್ ಅವರು ಉತ್ತಮ ಸಹಕಾರಿ ಪ್ರಶಸ್ತಿ ನೀಡಿ ಗೌರವಿಸಿದರು.

ಈ ಸಂದರ್ಭದಲ್ಲಿ ಇಫ್ಕೋ ಅಧ್ಯಕ್ಷರಾದ ದಿಲೀಪ್ ಸಂಘಾನಿ ಅವರು ಮಾತನಾಡಿ, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಬೆಂಗಳೂರು ಹಾಗೂ ನಾಫೇಡ್ ನವದೆಹಲಿ ಅಂತಾರಾಷ್ಟ್ರೀಯ ಮಟ್ಟದ ಇನ್ನಿತರ ಅನೇಕ ಸಹಕಾರ ಸಂಘ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ ಶ್ರೀ ಪತಂಗೆ

3ನೇ ಪುಟಕ್ಕೆ

ಕಬ್ಬು ಕಟಾವು ಹೆಸರಿನಲ್ಲಿ ರೈತರಿಗೆ ವಂಚನೆ ಆರೋಪ : ರೇಣುಕಾ ಸಕ್ಕರೆ ಕಾರ್ಖಾನೆ ಎದುರು ರೈತರ ಪ್ರತಿಭಟನೆ

ಅಫಜಲಪುರ,ಜ.02-

ತಾಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿ ರುವ ಸಕ್ಕರೆ ಕಾರ್ಖಾನೆಗಳು ಕಬ್ಬು ಕಟಾವು ಹೆಸರಿನಲ್ಲಿ ರೈತರನ್ನು ವ್ಯವಸ್ಥಿತವಾಗಿ ವಂಚಿಸುತ್ತಿವೆ ಎಂದು ಆರೋಪಿಸಿ, ಸ್ವಾಭಿಮಾನಿ ಕಬ್ಬು ಬೆಳೆಗಾರರ ಐಕ್ಯ ಹೋರಾಟ ಸಮಿತಿ ಹಾಗೂ ಕರ್ನಾಟಕ ಕಬ್ಬು ಬೆಳೆಗಾರರ ಸಂಘಗಳ ನೇತೃತ್ವದಲ್ಲಿ ಗುರುವಾರ ತಾಲೂಕಿನ ಹವಳಗಾ ರೇಣುಕಾ ಸಕ್ಕರೆ ಕಾರ್ಖಾನೆ ಎದುರು ರೈತರು ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ರೈತ ಪರ ಹೋರಾಟಗಾರರಾದ ಶ್ರೀಮಂತ ಬಿರಾದಾರ, ಗುರು ಚಾಂದಕವಟೆ ಮತ್ತು ರಮೇಶ್ ಪಾಟೀಲ ಅವರು, ಕಬ್ಬಿಗೆ ಸೂಕ್ತ ಬೆಂಬಲ ಬೆಲೆ ನೀಡದೆ ರೈತರನ್ನು ಆರ್ಥಿಕ ಸಂಕಷ್ಟಕ್ಕೆ ತಳ್ಳುತ್ತಿರುವ ಸಕ್ಕರೆ ಕಾರ್ಖಾನೆಗಳು, ಇದೀಗ ಕಬ್ಬು ಕಟಾವು ಗ್ಯಾಂಗ್ಗಳ ಮೂಲಕ ಅಕ್ರಮ ಹಣ ವಸೂಲಿಗೆ ಇಳಿದಿರುವುದು ಅಸಹ್ಯಕರ ಸಂಗತಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಸ್ತುತ ಎಕರೆಗೆ ರೂ.5,000 ರಿಂದ ರೂ.10,000 ವರೆಗೆ ಹಣ ವಸೂಲಿಗೆ ಇಳಿದಿದ್ದಾರೆ ಇದು ರೈತರ ಮೇಲೆ ಶೋಷಣೆ ಆಗುತ್ತಿದೆ ಎಂದು ಆರೋಪಿಸಿದರು.



ಒಂದು ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬು ವಿಭಾಗ, ಸಾಗಾಣಿಕೆ ಹಾಗೂ ಕಟಾವು ವಿಭಾಗಗಳಲ್ಲಿ 70ಕ್ಕೂ ಹೆಚ್ಚು ಸಿಬ್ಬಂದಿ ಕಾರ್ಯನಿರ್ವಹಿ ಸುತ್ತಿದ್ದರೂ, ಕಬ್ಬು ನಾಟಿಯಿಂದ ಸರ್ವೆ ಹಾಗೂ ಅಂತಿಮ ಕಟಾವುವರೆಗೆ ಜವಾಬ್ದಾರಿ ಹೊಂದಿರುವ ಈ ವಿಭಾಗಗಳು ರೈತರಿಗೆ ಆಗುತ್ತಿರುವ ಅನ್ಯಾಯವನ್ನು ತಡೆಯಲು ಸಂಪೂರ್ಣವಾಗಿ ವಿಫಲವಾಗಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರೈತರು 12 ತಿಂಗಳು ಪೂರ್ತಿಯಾಗುವ ಮೊದಲು ಕಬ್ಬು ಕಟಾವು ಮಾಡಬಾರದು. ಅದಕ್ಕಿಂತ ಮುಂಚಿತವಾಗಿ ಕಟಾವು ಮಾಡಿದರೆ ಇಳುವರಿ ಕುಂಠಿತವಾಗುತ್ತದೆ. ಈ ಕುರಿತು ರೈತರು ಪರಸ್ಪರ ಸಹಕಾರದಿಂದ ನಡೆದುಕೊಳ್ಳಬೇಕು ಎಂದು ಅವರು ಮನವಿ ಮಾಡಿದರು.

ಒಂದು ಕಡೆ ಕಬ್ಬಿಗೆ ಸಮರ್ಪಕ ಬೆಂಬಲ ಬೆಲೆ ಇಲ್ಲದೆ ರೈತರು ಸಂಕಷ್ಟ ಅನುಭವಿಸುತ್ತಿದ್ದರೆ, ಮತ್ತೊಂದು ಕಡೆ ಔಷಧಿ ಹಾಗೂ ಗೊಬ್ಬರದ ಬೆಲೆ ಏರಿಕೆಯಿಂದ ಕೃಷಿ ವೆಚ್ಚ ದುಬಾರಿಯಾಗಿದೆ. ಇಂತಹ ಸಂದರ್ಭದಲ್ಲಿ ಕಾರ್ಖಾನೆ ಸಿಬ್ಬಂದಿಯ ವರ್ತನೆ ಗಾಯದ ಮೇಲೆ ಬರೆ ಎಳೆದಂತೆ' ರೈತರ ಮೇಲೆ ಮತ್ತಷ್ಟು ಹೊರೆ ಹಾಕುತ್ತಿದೆ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ಹಿರಿಯತನದ ಆಧಾರದ ಮೇಲೆ ಕಬ್ಬು ಕಟಾವು ನಡೆಯದೆ ಇರುವುದರಿಂದ ಇಳುವರಿ ಕುಸಿಯುವ ಭೀತಿ ಹೆಚ್ಚಿದ್ದು, 12 ತಿಂಗಳೊಳಗೆ ಕಟಾವು ಆಗದಿದ್ದರೆ ಉತ್ಪಾದನೆಗೆ ಭಾರೀ ಹಾನಿಯಾಗಲಿದೆ. ಕರ್ತವ್ಯ ನಿರ್ವಹಣೆಯಲ್ಲಿ ವಿಫಲರಾದ ಅಧಿಕಾರಿಗಳ ವಿರುದ್ಧ ಜಿಲ್ಲಾಡಳಿತ ತಕ್ಷಣ ಕ್ರಮ ಜರುಗಿಸಬೇಕು ಎಂದು ಅವರು ಒತ್ತಾಯಿಸಿದರು.

ಪ್ರತಿಭಟನೆ ವೇಳೆ ರೇಣುಕಾ ಸಕ್ಕರೆ ಕಾರ್ಖಾನೆ ಆಡಳಿತ ಮಂಡಳಿಯ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ, ರೈತರ ಸಮಸ್ಯೆಗಳನ್ನು ಶೀಘ್ರವಾಗಿ ಬಗೆಹರಿಸುವ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಕಬ್ಬು ಅಭಿವೃದ್ಧಿ ಮಂಡಳಿ ಅಧಿಕಾರಿ ಚಿದಾನಂದ ಹಿರೇಮಠ ಮಾತನಾಡಿ, ತಕ್ಷಣ ಸಭೆ ಕರೆದು ಅಕ್ರಮ ಹಣ ವಸೂಲಿಯನ್ನು ತಡೆಯಲಾಗುವುದು ಹಾಗೂ ಹಿರಿಯತನದ ಆಧಾರದ ಮೇಲೆ ಕಬ್ಬು ಕಟಾವು ನಡೆಸಲಾಗುವುದು ಎಂದು ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ರೈತ ಮುಖಂಡರಾದ ಯಲ್ಲಪ್ಪ ಮ್ಯಾಕೇರಿ, ಬಸವರಾಜ ಪಾಟೀಲ, ಜಗಲೆಪ್ಪ ಪೂಜಾರಿ, ಸಂತೋಷ ಮಾಲಿಪಾಟೀಲ, ಸಂಗಣ್ಣ ನಾರಶೇರ, ಬಸವರಾಜ ಗಾಣೂರ, ರಾಜುಗೌಡ ಬಿರಾದಾರ, ಅರ್ಜುನ ಕುಂಬಾರ, ಭೀಮನಗೌಡ, ಪುಂಡಲಿಕ ಸೋಲಾಪೂರ, ಸುರೇಶ್ ಪಾಟೀಲ, ಕಾಮಣ್ಣ ಹೂಗಾರ, ಕಾಮಣ್ಣಗೌಡ ಪಾಟೀಲ ಸೇರಿದಂತೆ ಅನೇಕ ರೈತರು ಪಾಲ್ಗೊಂಡಿದ್ದರು.



ಟೇಬಲ್ ಟೆನಿಸ್ ಹಾಲ್ ಸೌಲಭ್ಯಗಳ ನವೀಕರಣಕ್ಕೆ ಮನವಿ

ಬೀದರ್,ಜ.02-

ಜಿಲ್ಲಾ ಟೇಬಲ್ ಟೆನಿಸ್ ಅಸೋಸಿಯೇಷನ್ ವತಿಯಿಂದ ಜಿಲ್ಲೆಯ ಟೇಬಲ್ ಟೆನಿಸ್ ಹಾಲ್ನ ಮೂಲಸೌಕರ್ಯಗಳನ್ನು ನವೀಕರಿಸುವಂತೆ ಟೇಬಲ್ ಟೆನಿಸ್ ಅಸೋಸಿಯೇಷನ್ ವತಿಯಿಂದ ಜಿಲ್ಲಾ ಯುವ ಸೇವೆಗಳ ಅಧಿಕಾರಿಗೆ ಮನವಿ ಸಲ್ಲಿಸಲಾಗಿದೆ.

ಮನವಿ ಪತ್ರದಲ್ಲಿ, ಟೇಬಲ್ ಟೆನಿಸ್ ಕ್ರೀಡೆಯಲ್ಲಿ ಮಕ್ಕಳು ಹಾಗೂ ಯುವಕರ ಭಾಗವಹಿಸುವಿಕೆ ದಿನೇದಿನೇ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ತರಬೇತಿ ಹಾಗೂ ಪಂದ್ಯಾವಳಿಗಳನ್ನು ಸುರಕ್ಷಿತ ಮತ್ತು ವೃತ್ತಿಪರ ರೀತಿಯಲ್ಲಿ ಆಯೋಜಿಸಲು ಅಗತ್ಯವಾದ ಮೂಲಸೌಕರ್ಯ ಒದಗಿಸುವ ಅಗತ್ಯವಿದೆ ಎಂದು ತಿಳಿಸಲಾಗಿದೆ.

ಹಾಲ್ನಲ್ಲಿ ಆಟಗಾರರಿಗೆ ಗಾಯಗಳಾಗದಂತೆ ಹಾಗೂ ಆಟದ ಗುಣಮಟ್ಟ ಹೆಚ್ಚಿಸುವ ಉದ್ದೇಶದಿಂದ ರಬ್ಬರ್ ಅಥವಾ ಮರದ ಕ್ರೀಡಾ ನೆಲಹಾಸು ಅಳವಡಿಕೆ, ಹಳೆಯದಾಗಿ ನಾಶಗೊಂಡಿರುವ ಟೇಬಲ್ ಟೆನಿಸ್ ಮೇಜುಗಳನ್ನು ತೆಗೆದು ಹೊಸ ಮೇಜುಗಳನ್ನು ಒದಗಿಸುವುದು, ಜೊತೆಗೆ ಆಟಗಾರರ ಸುರಕ್ಷತೆ ಮತ್ತು ಉತ್ತಮ ಪ್ರದರ್ಶನಕ್ಕೆ ಅನುಕೂಲವಾಗುವಂತೆ ಮಿಂಚಿಲ್ಲದ ಸಮರ್ಪಕ ಬೆಳಕಿನ ವ್ಯವಸ್ಥೆ ಕಲ್ಪಿಸುವಂತೆ ಮನವಿಯಲ್ಲಿ ಒತ್ತಾಯಿಸಲಾಗಿದೆ.

ಬೀದರ್ ಜಿಲ್ಲೆಯ ಕ್ರೀಡಾಪಟುಗಳು ಸುರಕ್ಷಿತ ಹಾಗೂ ಮಾನದಂಡಗಳಿಗೆ ಅನುಗುಣವಾದ ಸೌಲಭ್ಯಗಳನ್ನು ಪಡೆಯುವಂತೆ ಈ ಮನವಿಯನ್ನು ತ್ವರಿತವಾಗಿ ಪರಿಗಣಿಸಬೇಕೆಂದು ಅಸೋಸಿಯೇಷನ್ ಕೋರಿದೆ.

ಈ ಸಂದರ್ಭದಲ್ಲಿ ಜಿಲ್ಲಾ ಟೇಬಲ್ ಟೆನಿಸ್ ಅಸೋಸಿಯೇಷನ್ ಅಧ್ಯಕ್ಷ ರಾಜಶೇಖರ ಜವಳೆ, ಕಾರ್ಯದರ್ಶಿ ವಿರೇಶ್ ಎಸ್. ವಡ್ಡಿ ಹಾಗೂ ಅಸೋಸಿಯೇಷನ್ನ ಪದಾಧಿಕಾರಿಗಳು ಮತ್ತು ಸದಸ್ಯರು ಉಪಸ್ಥಿತರಿದ್ದರು.



ಜೀವನಕ್ಕೆ ದಾರಿ ತೋರುವವನೇ ನಿಜವಾದ ಆದರ್ಶ ಶಿಕ್ಷಕ : ಸಿದ್ಧವೀರಯ್ಯ ರುದ್ನೂರ

ಬಸವಕಲ್ಯಾಣ,ಜ.02-

ಸಮಾಜದಲ್ಲಿ ಮಕ್ಕಳು ಹೇಗೆ ಜೀವನ ಸಾಗಿಸಬೇಕು ಎಂಬುದಕ್ಕೆ ದಾರಿ ತೋರಿಸುವ ಶಿಕ್ಷಕರೇ ನಿಜವಾದ ಆದರ್ಶ ಶಿಕ್ಷಕರಾಗುತ್ತಾರೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಸಿದ್ಧವೀರಯ್ಯ ರುದ್ನೂರ ಹೇಳಿದರು.

ಹುಲಸೂರ ತಾಲ್ಲೂಕಿನ ಮಿರಖಲ್ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಶಿಕ್ಷಕ ರಮೇಶ ಫಾಳೆ ಅವರ ಸೇವಾ ನಿವೃತ್ತಿ ಪ್ರಯುಕ್ತ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಕ್ಕಳಿಗೆ ಪಾಠ ಹಾಗೂ ಆಟಗಳೊಂದಿಗೆ ಉತ್ತಮ ಸಂಸ್ಕಾರಗಳನ್ನು ಬೆಳೆಸುವುದು ಅತ್ಯಂತ ಅವಶ್ಯಕವಾಗಿದೆ. ಇಂದು ಗ್ರಾಮದ ಜನರ ಸಹಭಾಗಿತ್ವವನ್ನು ನೋಡಿದರೆ, ರಮೇಶ ಫಾಳೆ ಅವರು ಎಷ್ಟು ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸಿ ಮಕ್ಕಳಿಗೆ ಶೈಕ್ಷಣಿಕ ಜ್ಞಾನಕ್ಕೆ ಜೊತೆಗೆ ಉತ್ತಮ ಮೌಲ್ಯಗಳನ್ನು ಕಲಿಸಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ ಎಂದು ಹೇಳಿದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ನಾಗರಾಜ ಹಾವಣ್ಣಾ ಅವರು ಮಾತನಾಡಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷೆ ಸುವರ್ಣ ಮೇತ್ರೆ, ಎಸ್ಡಿಎಂಸಿ ಅಧ್ಯಕ್ಷೆ ಪೂಜಾ ಮಾಳಿ, ಬಸವಕಲ್ಯಾಣ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಸಂತೋಷ ಅಕ್ಕಣ, ಶಿಕ್ಷಣ ಸಂಯೋಜಕ ರಾಜಕುಮಾರ ಸಾಲಿ, ಶಿವರಾಜ ಕನಕಟ್ಟೆ, ರವಿಂದ್ರ ಖಂಡಾಳೆ, ಸಿಆರ್ಪಿ ಶಮಾ ಬಿ., ಡಾ. ಧರ್ಮೇಂದ್ರ ಭೋಸ್ಲೆ, ವೆಂಕಟ ಕುಂಬಾರ, ಸಂತೋಷ ಕಾಂಬ್ಳೆ, ಶಂಕರಯ್ಯ ಮಠಪತಿ, ಸರ್ಕಾರಿ ನೌಕರರ ಸಂಘದ ಕಾರ್ಯದರ್ಶಿ ಶಿವರಾಜ ಮಾಶೆಟ್ಟಿ, ಹುಲಸೂರ ಹಾಗೂ ಬಸವಕಲ್ಯಾಣ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಹರಿನಾಥ ಪಾಟೀಲ ಮತ್ತು ಲಕ್ಷ್ಮಣ ಹೆಂಬಾಡೆ, ಸರ್ಕಾರಿ ನೌಕರರ ರಾಜ್ಯ ಪರಿಷತ್ ಸದಸ್ಯ ಭೀಮಾಶಂಕರ ಆದೆಪ್ಪ, ವರ್ಷಾ ಪಂಚಾಳ, ರಾಜಮತಿ ಕೊರಾಳೆ, ರೋಹಿದಾಸ್ ಮಾಲೆ, ಶರಣಬಸಪ್ಪ ಬಿರಾದಾರ, ವಿರೇಂದ್ರ ರಡ್ಡಿ, ಕಾಶಿನಾಥ ಹೋಳ್ಕಡೆ ಸೇರಿದಂತೆ ಶಾಲಾ ಮುಖ್ಯ ಗುರುಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಹಾಲವರ್ತಿಯಲ್ಲಿ ಗ್ರಾಮ ಪಂಚಾಯತ್ ವಾರ್ಷಿಕ ಕರಡು ಅಭಿವೃದ್ಧಿ ಯೋಜನೆಯ ಗ್ರಾಮ ಸಭೆ

ಕೊಪ್ಪಳ ,ಜ.02-

ರಾಷ್ಟ್ರಪಿತ ಮಹಾತ್ಮಾ ಗಾಂಧಿಜೀಯವರು ಕಂಡ ಕನಸಿನ ಗ್ರಾಮ ಸ್ವರಾಜ್ಯ ಮಾಡಲು ಎಲ್ಲರೂ ಶ್ರಮಿಸಬೇಕಿದೆ ಎಂದು ಕರ್ನಾಟಕ ರಾಜ್ಯ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷರಾದ ಡಿ.ಆರ್.ಪಾಟೀಲ ಹೇಳಿದರು.

ಅವರು ಗುರುವಾರ ಕೊಪ್ಪಳ ತಾಲ್ಲೂಕಿನ ಹಾಲವರ್ತಿ ಗ್ರಾಮ ಪಂಚಾಯತ್ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಕೊಪ್ಪಳ ಹಾಗೂ ಗ್ರಾಮ ಪಂಚಾಯತ್ ಹಾಲವರ್ತಿ ಇವರ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 2026-27ನೇ ಸಾಲಿನ ಗ್ರಾಮ ಪಂಚಾಯತ್ ವಾರ್ಷಿಕ ಕರಡು ಅಭಿವೃದ್ಧಿ ಯೋಜನೆಯ ಗ್ರಾಮ ಸಭೆಯಲ್ಲಿ ಮಾತನಾಡಿದರು.

ಗ್ರಾಮ ಸಭೆಗಳನ್ನು ಆಯೋಜಿಸಿ 2026-27ನೇ ಸಾಲಿನ ಕ್ರಿಯಾ ಯೋಜನೆ ಗಳನ್ನು ಸಿದ್ದಪಡಿಸಬೇಕು. ಅಭಿವೃದ್ಧಿ ಯೋಜನೆಗಳನ್ನು ರೂಪಿಸುವಾಗ ಜನರ ಬೇಡಿಕೆಗಳಿಗೆ ಆದ್ಯತೆ ನೀಡಬೇಕು. ಕಾಲಕಾಲಕ್ಕೆ ಗ್ರಾಮ ಸಭೆಗಳನ್ನು ನಡೆಸುವ ಮೂಲಕ ಜನರ ಸಮಸ್ಯೆಗಳನ್ನು ಆಲಿಸಿ, ಅವುಗಳಿಗೆ ಪರಿಹಾರ ನೀಡಬೇಕು. ಭಿನಮ್ಮ ಸಹಭಾಗಿತ್ವದಲ್ಲಿ ಎಂಬ ನಂಬಿಕೆ ಜನರಲ್ಲಿ ಮೂಡಿಸಿದಾಗ ಅಧಿಕಾರ ಯೋಜನೆಗಳ ವಿಕೇಂದ್ರೀಕರಣವಾಗಲು ಸಾಧ್ಯವಾಗುತ್ತದೆ ಎಂದರು.



ಪಂಚಾಯತ್ ರಾಜ್ ವ್ಯವಸ್ಥೆ ಸ್ವರೂಪ ಕಾಣಲು ಸಾಧ್ಯವಾಗುತ್ತದೆ. ಹಾಗಾಗಿ ಜನರ ಸಹಭಾಗಿತ್ವಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕು. ಎಲ್ಲರನ್ನೂ ಸಮಾನವಾಗಿ ಕಂಡಾಗ ಮಾತ್ರ ಅಭಿವೃದ್ಧಿಯಾಗಲು ಸಾಧ್ಯವಾಗುತ್ತದೆ. ಎಲ್ಲಾ ಗ್ರಾಮೀಣ ಕುಟುಂಬಕ್ಕೆ ಸಂಪನ್ಮೂಲ ಜೋಡಿಸುವ ಕೆಲಸ ಆಗಬೇಕು. ಇದಕ್ಕಾಗಿ ಗ್ರಾಮೀಣ ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿ ಅವುಗಳಿಗೆ ಪ್ರೋತ್ಸಾಹಿಸುವ ಕೆಲಸವಾಗಬೇಕು ಎಂದರು.

ಗ್ರಾಮ ಪಂಚಾಯತಿಗಳು ಗ್ರಾಮ ಸರ್ಕಾರಗಳಾಗಿ ಕಾರ್ಯನಿರ್ವಹಿಸಲು ಕಾನೂನಿನಲ್ಲಿ ಅವಕಾಶ ನೀಡಲಾಗಿದೆ. ಮಹಾತ್ಮಾ ಗಾಂಧಿಜೀಯವರ ಕನಸಿನ ಗ್ರಾಮ ಸ್ವರಾಜ್ಯ ಮತ್ತು ಗ್ರಾಮ ಸರ್ಕಾರವನ್ನು ಮಾಡಲು ನಾವೆಲ್ಲರೂ ಬದ್ಧರಾಗೋಣ. ಮನುಷ್ಯ ಯಾರು ಸಹ ಪರಿಪೂರ್ಣನಾಗಿರುವುದಿಲ್ಲ. ಅವನಲ್ಲಿ ಒಂದಲ್ಲ ಒಂದು ದೋಷಗಳಿರುತ್ತವೆ. ಅವುಗಳನ್ನು ಪ್ರತಿವರ್ಷ ಕಡಿಮೆ ಮಾಡಬೇಕು ಮತ್ತು ಒಳ್ಳೆಯ ಗುಣಗಳನ್ನು ಹೆಚ್ಚಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ನಾವೆಲ್ಲರೂ ಗ್ರಾಮಗಳ ಸ್ವಚ್ಛತೆಗೆ ಆದ್ಯತೆ ನೀಡಬೇಕು ಎಂದು ಹೇಳಿದರು.

ಕೊಪ್ಪಳ ವಿಧಾನಸಭಾ ಕ್ಷೇತ್ರದ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ್, ಕರ್ನಾಟಕ ಗಾಂಧಿ ಸ್ಮಾರಕ ಭವನದ ಅಧ್ಯಕ್ಷರಾದ ನಾಡೋಜ ಉಡೇ ಪಿ.ಕೃಷ್ಣ ಮಾತನಾಡಿದರು.

ಸಭೆಯಲ್ಲಿ ಮಾಜಿ ಶಾಸಕರಾದ ಬಸವರಾಜ ಹಿಟ್ನಾಳ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವರ್ಣಿತ್ ನೇಗಿ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರಾದ ಗೂಳೆಪ್ಪ ಹಲಗೇರಿ, ಜಿ.ಪಂ ಮುಖ್ಯ ಯೋಜನಾಧಿಕಾರಿ ಡಿ.ಮಂಜುನಾಥ, ಗಾಂಧಿ ಸ್ಮಾರಕ ನಿಧಿ ಕಾರ್ಯದರ್ಶಿ ಶಿವರಾಜ, ಹಾಲವರ್ತಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಜಯಪ್ರದಾ ಗೊರವರ, ಉಪಾಧ್ಯಕ್ಷರಾದ ಮಹೇಂದ್ರ, ಸದಸ್ಯರಾದ ನಾಗರಾಜ, ಜ್ಞಾನಪ್ಪ ತಳಕಲ್, ಕೆ.ಸತೀಶ್, ಮಹಾಂತೇಶ ಹಾನಗಲ್ ಹಾಗೂ ಹನುಮಂತಪ್ಪ ಕಿಡದಾಳ, ಇಬ್ರಾಹಿಂ, ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಜಿಲ್ಲಾಡಳಿತದಿಂದ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಕರಣಾ ದಿನಾಚರಣೆ

ಕಲಬುರಗಿ,ಜ.02-

ಭಾರತ ಸೇರಿದಂತೆ ಹಾಗೂ ವಿಶ್ವದ ವಿವಿಧ ಕಡೆ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿಯವರ ಶಿಲ್ಪಕಲೆಗಳು ಇಂದಿಗೂ ಜೀವಂತವಾಗಿದೆ. ಶಿಲ್ಪಕಲೆಗೆ ಅವರು ನೀಡಿರುವ ಬೇಲೂರು, ಹಳೇಬಿಡು, ಸೋಮನಾಥಪುರ ದೇವಾಲಯಗಳಲ್ಲಿನ ಶಿಲ್ಪಕಲೆಗಳೆ ಸಾಕ್ಷಿ ಎಂದು ಬೀದರ್ ಬಿ.ವಿ.ಬಿ. ಕಾಲೇಜಿನ ಉಪನ್ಯಾಸಕ ಡಾ.ಚಿದಾನಂದ ಮೋನಪ್ಪ ಸುತಾರ ಹೇಳಿದರು.

ಗುರುವಾರದಂದು ಡಾ.ಎಸ್.ಎಂ.ಪಂಡಿತ ರಂಗಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಪಂಚಾಯತ್ ಕಲಬುರಗಿ ಇವರುಗಳ ಸಂಯುಕ್ತಾಶ್ರಯದಲ್ಲಿ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಕರಣಾ ದಿನಾಚರಣೆ 2026ರ ಕಾರ್ಯಕ್ರಮದಲ್ಲಿ ಭಾಗವಹಿಸಿ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಕರಣಾ ದಿನಾಚರಣೆ ಅಂಗವಾಗಿ ರವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಅವರು ಮಾತನಾಡಿದರು.



ನಶಿಸಿಹೋಗುತ್ತಿರುವ ವಿಶ್ವಕರ್ಮದ ಕುಲಕಸುಬುಗಳನ್ನು ಮುಂದಿನ ಪೀಳಿಗೆಗೆ ಉಳಿಸಿ, ಬೆಳಸಿ ಮುಂದುವರಿಸಲು ಎಲ್ಲರೂ ಪ್ರಯತ್ನ ಮಾಡಬೇಕೆಂದು ಅವರು ಕರೆ ನೀಡಿದರು.

ಅಮರಶಿಲ್ಪಿ 12ನೇ ಶತಮಾನದಲ್ಲಿ ವಿಷ್ಣುವರ್ಧನ ಆಸ್ಥಾನದಲ್ಲಿ ಶ್ರೇಷ್ಠ ಶಿಲ್ಪಿಗಳಾಗಿದ್ದರು. ಜಗತ್ತಿನ ಅದ್ಭುತ ಶಿಲ್ಪಗಳ ಸಾಲಿನಲ್ಲಿ ಕೆತ್ತಿದ ಕಲಾಕೃತಿಗಳನ್ನು ನೋಡುವುದು ನಮ್ಮ ಸೌಭಾಗ್ಯ. ಮಾಡುವ ಕೆಲಸ ಬಗ್ಗೆ ತಿಳುವಳಿಕೆ ಶ್ರದ್ಧೆ, ನಿಷ್ಠೆ ಮತ್ತು ಪ್ರಾಮಾಣಿಕತೆ ಇದ್ದಲ್ಲಿ ಯಶಸ್ಸು ಲಭಿಸುತ್ತದೆ ಎಂದರು.


ಸುಲೇಪೇಟ್ ವಿಶ್ವಕರ್ಮ ಏಕದಂಡಿಯ ದೊಡೇಂದ್ರ ಸ್ವಾಮೀಜಿ ಅವರು ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿ, ನಮ್ಮ ದೇಶ ಶಿಲ್ಪಕಲೆಯ ಮೂಲಕ ಶ್ರೀಮಂತಗೊಳಿಸಬೇಕು. ವಿದೇಶಿಗರು ನಮ್ಮ ನಾಡಿನ ಶಿಲ್ಪಕಲೆಯನ್ನು ನೋಡಲು ಬೆರಗಾಗುವಂತೆ ಶಿಲ್ಪಕಲೆಯನ್ನು ನಿರೂಪಿಸಲಾಗಿದೆ ಎಂದು ಹೇಳಿದರು.

ಕಲಬುರಗಿ ಮತ್ತು ಅಫಜಲಪೂರ ಮಠದ ಮಹಾಸ್ವಾಮಿಗಳು ವಿಶ್ವಕರ್ಮ ಮೂರು ಜಾವಾದೀಶ್ವರ ಮಠದ ಪ್ರಣವ ನಿರಂಜನ ಸ್ವಾಮಿಗಳು ಮಾತನಾಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪನಿರ್ದೇ ಶಕಿ ಜಗದೀಶ್ವರಿ ನಾಸಿ ಅವರು ಸ್ವಾಗತಿಸಿದರು.

ಇದೇ ಸಂದರ್ಭದಲ್ಲಿ ರಾಷ್ಟ್ರೀಯ ಕರಕುಶಲ ಪ್ರಶಸ್ತಿ ಪುರಸ್ಕೃತ ಚಂದ್ರಶೇಖರ್ ವೈ.ಶಿಲ್ಪಿ ಹಾಗೂ ವಿಶ್ವಕರ್ಮ ಸಮಾಜದ ಮುಖಂಡರನ್ನು ಸನ್ಮಾನಿಸಲಾಯಿತು.

ಜಿಲ್ಲಾಧಿಕಾರಿ ಕಾರ್ಯಾಲಯ ಕಚೇರಿಯ ಸಹಾಯಕರಾದ ಶಿವಪ್ರಭು ಹಿರೇಮಠ, ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾದ ಅಧ್ಯಕ್ಷರಾದ ಕಮಲಾಕರ, ಮಹಾನಗರ ಪಾಲಿಕೆಯ ಮಾಜಿ ಸದಸ್ಯರು ಅರವಿಂದ ಪೋದ್ದಾರ, ಚಿತ್ರಲೇಖ ಟೆಂಗಳಿಕರ, ಮೌನೇಶ್ವರ ದೇವಸ್ಥಾನದ ಅರ್ಚಕರಾದ ಶಿವರಾಜ ಶಾಸ್ತ್ರಿ, ದೇವೆಂದ್ರ ದೇಸಾಯಿ, ದೇವೆಂದ್ರಪ್ಪ ಸುತ್ತಾರ, ಸೇರಿದಂತೆ ಸಮಾಜದ ಮುಖಂಡರು ಭಾಗವಹಿಸಿದ್ದರು.



ದಲಿತಪರ ಸಂಘಟನೆಗಳಿಂದ ಭೀಮಾ ಕೋರೆಗಾಂವ್ ವಿಜಯೋತ್ಸವ ಆಚರಣೆ

ಸಿರುಗುಪ್ಪ ,ಜ.02-

ನಗರದ ತಾಲೂಕು ಕ್ರೀಡಾಂಗಣ ದಲ್ಲಿ ವಿವಿಧ ದಲಿತಪರ ಸಂಘಟನೆಗಳ ವತಿಯಿಂದ ಆಯೋಜಿಸಿದ್ದ ಭೀಮಾ ಕೋರೆಗಾಂವ್ ವಿಜಯೋತ್ಸವದ ಬೃಹತ್ ಮೆರವಣಿಗೆಗೆ ವಾಲ್ಮೀಕಿ ವಿದ್ಯಾಭಿವೃದ್ಧಿ ಟ್ರಸ್ಟ್ನ ತಾಲೂಕಾಧ್ಯಕ್ಷ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಸರ್ವಧರ್ಮೀಯ ಸಂಘಟನೆಯ ಗೌರವಾಧ್ಯಕ್ಷ ಬಿ.ಎಂ.ಸತೀಶ್ ಅವರು ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ ಸರ್ವಧರ್ಮೀಯ ಸಂಘಟನೆಯ ಅಧ್ಯಕ್ಷ ಡಾ. ಕೊಡ್ಲೆ ಮಲ್ಲಿಕಾರ್ಜುನ, ಡಾ.ಬಿ.ಆರ್.ಅಂಬೇಡ್ಕರ ಸಂಘದ ತಾಲೂಕಾಧ್ಯಕ್ಷ ಚಿಕ್ಕಬಳ್ಳಾರಿ ನಾಗಪ್ಪ ಮಾತನಾಡಿದರು. ತಾಲೂಕು ಕ್ರೀಡಾಂಗಣದಿಂದ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ ವೃತ್ತದ ವರೆಗೆ ರಾಜ ಬೀದಿ ಯಲ್ಲಿ ಮೆರವಣಿಗೆ ಸಾಗಿತು. ಈ ಸಂದರ್ಭದಲ್ಲಿ ದಲಿತಪರ ಸಂಘಟನೆಗಳ ಮುಖಂಡರಾದ ವೀರೇಶ, ಎಚ್.ಗಣೇಶ, ದರಗಪ್ಪ ಸೇರಿದಂತೆ ಇನ್ನಿತರ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಅಸಮಾನತೆ ವಿರುದ್ಧ ನಡೆದ ಯುದ್ಧವೇ ಭೀಮಾ ಕೋರೆಗಾಂವ್ ಯುದ್ಧ : ಮಹೇಶ್ ಗೋರನಾಳಕರ್

ಬೀದರ್,ಜ.02-

ಅಸಮಾನತೆ ವಿರುದ್ಧ ನಡೆದ ಯುದ್ಧವೇ ಭೀಮಾ ಕೋರೆಗಾಂವ್ ಯುದ್ಧವಾಗಿದೆ ಎಂದು ಭಿಮನೆ ಮನೆಗೆ ಅಂಬೇಡ್ಕರ್ ಅಭಿಯಾನಭಿದ ಸಂಚಾಲಕ ಮಹೇಶ್ ಗೋರನಾಳಕರ್ ಅವರು ತಿಳಿಸಿದರು.

ಗುರುವಾರ ನಗರದ ಅಂಬೇಡ್ಕರ್ ವೃತ್ತದಲ್ಲಿ ಮನೆ ಮನೆಗೆ ಅಂಬೇಡ್ಕರ್ ಅನುಷ್ಠಾನ ಸಮಿತಿ ಹಾಗೂ ವಿವಿಧ ದಲಿತ ಮತ್ತು ಪ್ರಗತಿಪರ ಸಂಘಟನೆಗಳ ವತಿಯಿಂದ ಜರುಗಿದ 208ನೇ ಭೀಮಾ ಕೋರೆಗಾಂವ್ ವಿಜಯೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜ.1ರ, 1818ರಲ್ಲಿ ಮಹಾರಾಷ್ಟ್ರ ರಾಜ್ಯದಲ್ಲಿ ನಡೆದ ಭೀಮಾ ಕೋರೆಗಾಂವ್ ಯುದ್ಧವು ಅಸಮಾನತೆಯ ವಿರುದ್ಧ ನಡೆದ ಸ್ವಾಭಿಮಾನದ ಯುದ್ಧವಾಗಿದೆ. ಆ ಯುದ್ಧದಲ್ಲಿ 500 ಜನರ ದಲಿತರು 28 ಸಾವಿರ ಮೇಲ್ಜಾತಿಯ ಪೆಶ್ವೆಗಳನ್ನು ಸೋಲಿಸಿದ್ದರು. ಇಂತಹ ಸ್ವಾಭಿಮಾನದ ಐತಿಹಾಸಿಕ ಯುದ್ಧವನ್ನು ಮುಚ್ಚಿಡಲಾಗಿತ್ತು. ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರು ದೇಶ ಮತ್ತು ವಿಶ್ವಕ್ಕೆ ಈ ಯುದ್ಧದ ಬಗ್ಗೆ ಪರಿಚಯಿಸಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಜಿಲ್ಲಾ ಪಂಚಾಯತ್ ಉಪಾಧ್ಯಕ್ಷೆ ಉಷಾಬಾಯಿ ಬನಸೂಡೆ ಮತ್ತು ಜ್ಞಾನೋದಯ ಶಿಕ್ಷಣ ಸಂಸ್ಥೆ ಅಧ್ಯಕ್ಷ ದಶರಥ್ ಗುರು ಅವರು ಡಾ.ಬಾಬಾಸಾಹೇಬ್ ಅಂಬೇಡ್ಕರ ರವರ ಪುತ್ಥಳಿಗೆ ಮಾಲಾರ್ಪಣೆ ಮಾಡಿದರು.



ಈ ಸಂದರ್ಭದಲ್ಲಿ ನಂದಮ್ಮಾ ಕುಂದೆ, ಸೋನಮ್ಮಾ ಕಸ್ತೂರೆ, ಶಶಿಕಲಾ ಕಾಂಬಳೆ, ಇಂದುಮತಿ ಸಾಗರ, ನಿವೃತ್ತ ಪೊಲೀಸ್ ಅಧಿಕಾರಿ ಬಸವರಾಜ್ ಮೆತ್ರೆ, ಸಿದ್ರಾಮಪ್ಪಾ, ಅಂಬಾದಾಸ್ ಗಾಯಕವಾಡ್, ಮುಖೇಶ್ ರಾಯ್, ಪ್ರಮುಖರಾದ ಚಂದ್ರಕಾಂತ್ ನಿರಾಟೆ, ಅರುಣ ಪಟೇಲ್, ಜಗನಾಥ್ ಗಾಯಕವಾಡ್, ಗೋಪಾಲ್ ದೊಡ್ಡಿ, ಹರ್ಷಿತ್ ದಾಂಡೆಕರ, ಜೈ ಭೀಮ್ ಮಿಠಾರೆ, ಸುಬ್ಬಣ್ಣ ಕರಕನಳ್ಳಿ, ಶರಣು ಫುಲೆ, ನವನಾಥ್ ವಂಟೆ, ಪ್ರಶಾಂತ್ ಭಾವಿಕಟ್ಟಿ, ರಾಜಶೇಖರ ಹಲಮಡಗೆ, ಶಿವರಾಜ್ ಅಮಲಾಪೂರ, ನಾಗೇಶ್ ಸಾಗರ, ಧನರಾಜ್, ಸತೀಶ್ ದಿನೆ, ಎಂ.ಡಿ ಅನ್ವರಶಾ, ಮುಹಮ್ಮದ್ ಖಾಲಿದ್, ಜಗನಾಥ್ ಮಹೇಂದ್ರ, ನಗರ ಹಾಗೂ ಮಾರುತಿ ಚಿಟ್ಟಾ ಅಮಿತ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಒಂದನೇಯ ಪುಟದಿಂದ

ಜ.4ರಂದು ಮಹಿಳಾ ಪರಿಷತ್ ಉದ್ಘಾಟನೆ

ಕರೆಮ್ಮ ಜಿ. ನಾಯಕ, ಕೃಷ್ಣ ಶಾವಂತಗೇರಿ, ಡಾ. ಅರುಣಾ ಹಿರೇಮಠ, ಶ್ರೀದೇವಿ ನಾಯಕ, ನಿರ್ಮಲಾ ಬೆಣ್ಣೆ, ವಿಜಯ ರಾಜೇಶ್ವರಿ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿರಲಿದ್ದಾರೆ.

ವಿಶೇಷ ಸನ್ಮಾನವನ್ನು ಡಿವೈಎಸ್ಪಿ ಶಾಂತವೀರ ಅವರಿಗೆ ಹಾಗೂ ಶಿಕ್ಷಣ ಕ್ಷೇತ್ರದ ಸಾಧನೆಗಾಗಿ ಇಂದಿರಾ ಅವರಿಗೆ ನೀಡಲಾಗುವುದು. ಮಹಿಳಾ ಪರಿಷತ್ತಿನ ಪದಾಧಿಕಾರಿಗಳ ಪದಗ್ರಹಣವನ್ನು ಚಂದ್ರಶೇಖರ ಮಿರ್ಜಾಪುರ, ನಾಗರತ್ನ ಬಿ. ಪಾಟೀಲ್, ವೆಂಕನಗೌಡ ವಟಗಲ್, ಲಲಿತಾ ಬಸವನಗೌಡ ನೆರವೇರಿಸಲಿದ್ದಾರೆ. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 12 ಜನರಿಗೆ ರಾಷ್ಟ್ರಮಟ್ಟದ ಕಾಯಕ ವಿಭೂಷಣ ಪ್ರಶಸ್ತಿ ಪ್ರದಾನಿಸಲಾಗುತ್ತದೆ.

ಇದೇ ಸಂದರ್ಭದಲ್ಲಿ ನಡೆಯುವ ಕವಿಗೋಷ್ಠಿಯನ್ನು ಹಿರಿಯ ಸಾಹಿತಿಗಳಾದ ವೀರ ಹನುಮನ ಉದ್ಘಾಟಿಸಲಿದ್ದು, ಡಾ. ರಾಜಶ್ರೀ ಕಲ್ಲೂರ್‌ಕರ್ ಅಧ್ಯಕ್ಷತೆ ವಹಿಸಲಿದ್ದಾರೆ. ಕವಿಗೋಷ್ಠಿಯ ಆಶಯ ನುಡಿಯನ್ನು ವೆಂಕಟೇಶ್ ಬಾಗಲವಾಡ ನೀಡಲಿದ್ದಾರೆ. ಕಾರ್ಯಕ್ರಮದ ನಿರೂಪಣೆಯನ್ನು ಯಶೋಧ ಹಾಗೂ ಧರ್ಮಾವತಿ ಎಸ್. ನಾಯಕ ಮಾಡಲಿದ್ದು, 15 ಕವಿಗಳು ಕವಿಗೋಷ್ಠಿಯಲ್ಲಿ ಭಾಗವಹಿಸಲಿದ್ದಾರೆ.

ಮುಂದಿನ ದಿನಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಇನ್ನಷ್ಟು ಮಹಿಳೆಯರನ್ನು ಗುರುತಿಸಿ ಗೌರವಿಸುವ ಕಾರ್ಯವನ್ನು ಪರಿಷತ್ ಕೈಗೊಳ್ಳಲಿದೆ. ಈ ಮೊದಲ ಕಾರ್ಯಕ್ರಮಕ್ಕೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಅಣ್ಣಪ್ಪ ಮೇಟಿಗೌಡ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಸಂಸ್ಥಾಪಕ ರಾಜ್ಯಾಧ್ಯಕ್ಷ ಡಾ. ಸರ್ವಮಂಗಳ ಸಕ್ರಿ, ಉಪಾಧ್ಯಕ್ಷೆ ಸರಿತಾ ಮಹೇಶ, ಯುವ ಘಟಕದ ಅಧ್ಯಕ್ಷೆ ಧರ್ಮಾ ವತಿ ಎಸ್. ನಾಯಕ ಉಪಸ್ಥಿತರಿ ದ್ದರು.

ಪ್ರಾಣಿಬಲಿ ತಡೆ ಜಾಗೃತಿಗಾಗಿ ಅಹಿಂಸಾ-ಪ್ರಾಣಿದಯಾ ಸಂದೇಶ ಯಾತ್ರೆ

ಗ್ರಾಮಾಂತರ ಪಿಎಸ್‌ಐ ಅವರಿಗೆ ಮನವಿ ಸಲ್ಲಿಸಲಾಗಿದೆ ಎಂದು ತಿಳಿಸಿದರು. ಪ್ರಾಣಿಬಲಿ ನಡೆದಿದ್ದಲ್ಲಿ ಅಥವಾ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳದಿದ್ದಲ್ಲಿ ಅದು ನ್ಯಾಯಾಲಯದ ಅವಮಾನ (Contempt of Court) ಆಗಲಿದೆ ಎಂಬುದನ್ನು ಅಧಿಕಾರಿಗಳ ಗಮನಕ್ಕೆ ತರಲಾಗಿದೆ ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ ದಯಾನಂದ ಸ್ವಾಮೀಜಿ, ಪ್ರಾಣಿಬಲಿ ಅನಾಗರಿಕ, ಅಂಧಶ್ರದ್ಧೆಯ, ಪರಿಸರ ಮಾಲಿನ್ಯಕಾರಕ ಹಾಗೂ ಸಾಂಕ್ರಾಮಿಕ ರೋಗಗಳಿಗೆ ಕಾರಣವಾಗುವ ಕೃತ್ಯ. ಇದು ಕಾನೂನು ಮತ್ತು ಧರ್ಮ ವಿರೋಧಿ. ಭಕ್ತರು ಅಷ್ಟವಿಧಾರ್ಚನೆಯ ಮೂಲಕ ಸಾತ್ವಿಕ ಪೂಜೆ ಸಲ್ಲಿಸಬೇಕು. ದೇವಾಲಯಗಳು ವಧಾಲಯಗಳಾಗದೆ ವಿದ್ಯಾಲಯ, ಧ್ಯಾನಾಲಯ ಮತ್ತು ಜ್ಞಾನಾಲಯಗಳಾಗಬೇಕು ಎಂದು ಹೇಳಿದರು.

ಭಾರತ ಸಂವಿಧಾನದ ಆರ್ಟಿಕಲ್ 51(ಎ) ಅಡಿಯಲ್ಲಿ ಅಹಿಂಸೆ, ಜೀವದಯೆ ಮತ್ತು ಮಾನವೀಯ ಮೌಲ್ಯಗಳ ಜಾಗೃತಿಗಾಗಿ ವಿಶ್ವ ಪ್ರಾಣಿ ಕಲ್ಯಾಣ ಮಂಡಳಿ ಹಾಗೂ ಸಹಭಾಗಿತ್ವದ ಸಂಘಟನೆಗಳಿಂದ ಅಹಿಂಸಾ-ಪ್ರಾಣಿದಯಾ-ಆಧ್ಯಾತ್ಮ ಸಂದೇಶ ಯಾತ್ರೆಯನ್ನು ಜಾತ್ರಾ ಪರಿಸರ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಹಮ್ಮಿಕೊಳ್ಳಲಾಗುವುದು ಎಂದು ಘೋಷಿಸಿದರು.

ಪ್ರಾಣಿಬಲಿ ತಡೆ ಕುರಿತು ಸರ್ಕಾರ, ಜಿಲ್ಲಾಡಳಿತ, ತಾಲೂಕಾಡಳಿತ, ದೇವಾಲಯದ ಆಡಳಿತ ಮಂಡಳಿ ಮತ್ತು ಪೊಲೀಸ್ ಇಲಾಖೆಗಳು ಕರಪತ್ರ, ಬ್ಯಾನರ್, ಧ್ವನಿವರ್ಧಕ ಹಾಗೂ ಮಾಧ್ಯಮಗಳ ಮೂಲಕ ವ್ಯಾಪಕ ಜಾಗೃತಿ ಮೂಡಿಸಬೇಕು ಎಂದು ಅವರು ಸರ್ಕಾರವನ್ನು ಆಗ್ರಹಿಸಿದರು.

ನರೇಗಾ ಕೂಲಿಕಾರರೊಂದಿಗೆ ಹೊಸ ವರ್ಷಾಚರಣೆ: ಕೇಕ್ ಕತ್ತರಿಸಿ ಸಿಹಿ ತಿನ್ನಿಸಿ ಶುಭಾಶಯ

ಮಾತ್ರ ಕೆಲಸಕ್ಕೆ ಬರಬೇಕು. ಕೂಲಿಕಾರರ ಹಾಜರಾತಿಯನ್ನು ಪ್ರತಿ ದಿನ ಎರಡು ಬಾರಿ ತೆಗೆಯಲಾಗುತ್ತದೆ. ಚೆನ್ನಾಗಿ ಕೆಲಸ ಮಾಡುವಂತೆ ತಿಳಿಸಿದರು.

ತಾಂತ್ರಿಕ ಸಂಯೋಜಕ ಶಿವು, ತಾಂತ್ರಿಕ ಸಹಾಯಕ ಸಾಗರ, ಐಇಸಿ ರಾಜೇಂದ್ರ, ಬಿಎಫ್ಟಿ ಅಮರೇಶ, ಜಿಕೆಎಂ ಶಿವಬಸಮ್ಮ, ಮೇಟ್ ಹಾಗೂ ಕೂಲಿಕಾರರು ಇದ್ದರು.

ಉದ್ಬಾಳ (ಯು) ಗ್ರಾಮದ ಶ್ರೀ ಅಂಬಾದೇವಿ ಪುರಾಣ, ಕಳಸ ಮೆರವಣಿಗೆಗೆ ನಿಷೇಧ ಆದೇಶ ತೆರವು

ನಡೆಸಿ ಜಾತ್ರಾ ಮಹೋತ್ಸ ವ ನಡೆಸುವಂತೆ ತಿಳಿ ಹೇಳಲಾಗಿದೆ. ಆದ್ದರಿಂದ ಶ್ರೀ ಅಂಬಾದೇವಿಯ ಜಾತ್ರಾ ಮಹೋತ್ಸ ವ ನಡೆಸಲು ಸಾರ್ವಜನಿಕರ ಹಿತದೃಷ್ಟಿಯಿಂದ, ಈ ಗ್ರಾಮದಲ್ಲಿ ಶಾಂತಿ, ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ಸಲುವಾಗಿ, ಮುಂಜಾಗ್ರತಾ ಕ್ರಮದ ದೃಷ್ಟಿಯಿಂದ ದಿನಾಂಕ: 03-01-2026 ರಂದು ಜಾತ್ರಾ ಮಹೋತ್ಸ ವವನ್ನು ನಡೆಸುವಂತೆ ಅನುಮತಿ ನೀಡಲು ವರದಿಯನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ಮಸ್ಕಿ ತಹಸೀಲ್ದಾರರ ವರದಿಯನ್ವಯ ರಾಯಚೂರು ಜಿಲ್ಲೆಯ ಮಸ್ಕಿ ತಾಲ್ಲೂಕಿನ ಉದ್ಬಾಳ (ಯು) ಗ್ರಾಮದಲ್ಲಿ ದಿನಾಂಕ: 03-01-2026 ರಂದು ಜರುಗುವ ಶ್ರೀ ಅಂಬಾದೇವಿ ಪುರಾಣ ಮತ್ತು ಕಳಸ ಮೆರವಣಿಯನ್ನು ಸಾರ್ವಜನಿಕವಾಗಿ ಗುಂಪು ಗುಂಪಾಗಿ ಆಚರಿಸುವುದು ಹಾಗೂ ಸಾರ್ವಜನಿಕವಾಗಿ ಮೆರವಣಿಗೆಯನ್ನು ನಡೆಸುವುದನ್ನು ನಿಷೇಧಿಸಿ ಹೊರಡಿಸಿದ ಆದೇಶವನ್ನು ಹಿಂಪಡೆಯಲಾಗಿದೆ ಎಂದು ಜಿಲ್ಲಾಧಿಕಾರಿಗಳು ಆದೇಶದಲ್ಲಿ ತಿಳಿಸಿದ್ದಾರೆ. ಜಿಲ್ಲಾ ಪೊಲೀಸ್ ಅಧೀಕ್ಷಕರು, ರಾಯಚೂರು ಮತ್ತು ತಹಶೀಲ್ದಾರ ಮಸ್ಕಿ ಅವರು ಯಾವುದೇ ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗದಂತೆ ಮುಂಜಾಗ್ರತಾ ಕ್ರಮ ವಹಿಸುವಂತೆ ಜಿಲ್ಲಾಧಿಕಾರಿಗಳು ಆದೇಶದಲ್ಲಿ ಸೂಚಿಸಿರುತ್ತಾರೆ.

ಜ.4 ಕ್ಕೆ ಸಿರವಾರ ಸರ್ಕಾರಿ ಪ್ರೌಢಶಾಲೆಯಲ್ಲಿ 60 ರ ಸಂಭ್ರಮ, ಐತಿಹಾಸಿಕ ಸಮಾರಂಭಕ್ಕೆ ಭರದ ಸಿದ್ದತೆ..!

ಕಾರ್ಯಕ್ರಮದ ನೇತೃತ್ವವನ್ನು 30 ಬ್ಯಾಚ್ ನ ವಿದ್ಯಾರ್ಥಿಗಳು ವಹಿಸಿಕೊಂಡಿದ್ದು, ತಮ್ಮಲ್ಲೇ ಸಮಿತಿಗಳನ್ನು ರಚಿಸಿಕೊಂಡು ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದಾರೆ. ಇದರೊಂದಿಗೆ ಒಳ್ಳೆಯ ಉದ್ದೇಶ ಹಾಗೂ ನಿರ್ದಿಷ್ಟ ದೃಷ್ಟಿಕೋನವನ್ನು ಇಟ್ಟುಕೊಂಡು ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಹಳೆಯ ವಿದ್ಯಾರ್ಥಿಗಳು ತಿಳಿಸಿದ್ದಾರೆ.

ಐತಿಹಾಸಿಕ ಸಮಾರಂಭವನ್ನು ಸರಕಾರಿ ಪ್ರೌಢ ಶಾಲೆಯ ಆವರಣದಲ್ಲಿ ನಡೆಸಲಾಗುತ್ತಿದೆ. ಕಾರ್ಯಕ್ರಮ ಯಶಸ್ವಿ ಯಾಗಲು ಕಾರ್ಯಕಾರಿ ಸಮಿತಿಯೊಂದನ್ನು ರಚಿಸಿಕೊಳ್ಳಲಾಗಿದೆ. ಈ ಕಾರ್ಯಕಾರಿ ಸಮಿತಿ ಅಡಿಯಲ್ಲಿ ವಿವಿಧ ಬ್ಯಾಚ್ ಗಳ ವಿದ್ಯಾರ್ಥಿಗಳ ಸಮಿತಿಗಳು ಕೆಲಸಮಾಡಲಿವೆ.

ವಿದ್ಯಾರ್ಥಿಗಳ ಸ್ವಯಂಪ್ರೇರಿತ ಸಹಕಾರ ಮತ್ತು ನೆರವಿನಿಂದ ಶಾಲೆಗೆ ಅಗತ್ಯವಿರುವ ಕೆಲವು ಮೂಲಭೂತ ಸೌಕರ್ಯಗಳನ್ನು ಒದಗಿಸ ಲಾಗುತ್ತಿದೆ. ಶಾಲೆಯ ಗೋಡೆಗಳಿಗೆ ಬಣ್ಣ ಬಳಿಯಲಾ ಗುತ್ತಿದೆ. ಶಾಲಾ ಆವರಣದಲ್ಲಿ ಬೃಹತ್ತಾದ ವೇದಿಕೆ ಸಿದ್ಧಪಡಿಸಲಾಗುತ್ತಿದೆ.

ದೂರದಿಂದ ಒಂದು ದಿನ ಮುಂಚೆ ಅಂದರೆ ಶನಿವಾರದಂದು ಆಗಮಿಸುವ ಎಲ್ಲಾ ಗುರುಗಳಿಗೆ ಉಳಿದುಕೊಳ್ಳಲು ಪಟ್ಟಣದ ವಿದ್ಯಾವಾಹಿನಿ ಖಾಸಗಿ ಶಾಲೆಯಲ್ಲಿ ಅಚ್ಚುಕಟ್ಟಾದ ವ್ಯವಸ್ಥೆ ಮಾಡಲಾಗಿದೆ. ಕಾರ್ಯಕ್ರಮದ ಪೆಂಡಾಲ್, ವೇದಿಕೆ, ಕುಡಿಯುವ ನೀರು, ವೇದಿಕೆಯ ಕಾರ್ಯ ಕ್ರಮದ ರೂಪುರೇಷ,


ಊಟದ ವ್ಯವಸ್ಥೆ ಸೇರಿದಂತೆ ಪ್ರತಿಯೊಂದು ಸೌಕರ್ಯ ಗಳನ್ನು ವಿವಿಧ ಬ್ಯಾಚ್ ನ ವಿದ್ಯಾರ್ಥಿಗಳ ಸಮಿತಿಗಳು ಜವಾಬ್ದಾರಿ ನಿರ್ವಹಿಸಲಿವೆ. ಒಟ್ಟಾರೆಯಾಗಿ ಎಲ್ಲಾ ವಿದ್ಯಾರ್ಥಿಗಳ ಸಮಾಗಮ ಹಾಗೂ ಐತಿಹಾಸಿಕ ಗುರುವಂದನಾ ಕಾರ್ಯ ಕ್ರಮಕ್ಕೆ ಭರದ ಸಿದ್ಧತೆ ಜೋರಾಗಿದ್ದು, ಸರಕಾರಿ ಶಾಲೆಯಲ್ಲಿ ಹಬ್ಬದ ಸಂಭ್ರಮ ಮನೆಮಾಡಿದೆ.

ಪತಂಗೆ ಜಯವಂತರಾವ್ ಅವರಿಗೆ ಉತ್ತಮ ಸಹಕಾರಿ ಪ್ರಶಸ್ತಿ ಪ್ರದಾನ

ಜಯವಂತರಾವ್ ಅವರು ಸುಧೀರ್ಘ 40 ವರ್ಷಗಳಿಂದ ರೈತ ಸಹಕಾರಿ ಸಂಘ-ಸಸ್ಥೆಗಳಲ್ಲಿ ಅನೇಕ ವಹಿವಾಟುಗಳನ್ನು ಉತ್ತಮವಾಗಿ ನಿರ್ವಹಿಸಿದ್ದಾರೆ. ಅಲ್ಲದೇ ಬೃಹತ್ ಕೈಗಾರಿಕೆ ಸ್ಥಾಪನೆಗೆ ಮುಂದಾಗಿ ರೈಸ್ ಮಿಲ್, ಹತ್ತಿ ಜಿನ್ನಿಂಗ್ ಮತ್ತು ಪ್ರಸ್ಸಿ ಂಗ್, ನೂತನ ಪೆಟ್ರೋಲ್ ಬಂಕ್ ಸ್ಥಾಪಿಸಿದ್ದಾರೆ. ಎಲ್ಲಾ ಖಾಸಗಿ ಸಂಸ್ಥೆಗಳು, ಬ್ಯಾಂಕಿಗ್, ಹಾಲಿನ ಉತ್ಪನ್ನ ಮಾರಾಟ, ರಸಗೊಬ್ಬರ, ಕ್ರಿಮಿನಾಶಕ, ಬೀಜೋತ್ಪನ್ನಗಳು ಇನ್ನು ಅನೇಕ ಕ್ಷೇತ್ರಗಳಲ್ಲಿ ದೊಡ್ಡಮಟ್ಟದಲ್ಲಿ ವಿಸ್ತರಣೆಗೊಂಡರು ಅವುಗಳಿಗೆ ಸವಾಲೆಸೆಯುವ ರೀತಿಯಲ್ಲಿ ಸಹಕಾರಿ ಕ್ಷೇತ್ರ ಬೆಳವಣಿಗೆಗೆ ಶ್ರಮಿಸಿದ್ದಾರೆ. ಇವರು ಸಹಕಾರಿ ರಂಗದ ಗ್ರಾಮೀಣ ಜನರ ಒಡನಾಡಿಯಾಗಿ ಕೆಲಸ ಮಾಡುತ್ತಿದ್ದಾರೆ. ಸಾಲಶೂಲಕ್ಕೆ ಬದಲಾಗಿ ಉದ್ಯಮಕ್ಕೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಹೊಸತನದೊಂದಿಗೆ ಆರ್ಥಿಕ ಸಂಕಷ್ಟ ಎದುರಿಸುತ್ತಿರುವ ಜನರಿಗೆ ಸ್ಪಂದಿಸುವ ಕೆಲಸವನ್ನು ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂದು ತಿಳಿಸಿದರು.

ಆಡಳಿತ ಮಂಡಳಿಯಿದ ಅಭಿನಂದನೆ: ಇಂಡಿಯನ್ ಫಾರ್ಮಸ್ ಫರ್ಟಿಲೈಸರ್ ಕೋ ಅಫರೇಟೀವ್ ಲಿಮಿಟೆಡ್ (ಇಫ್ಕೋ) ಭಾರತದಲ್ಲಿ ಮಾತ್ರವಲ್ಲದೇ ಜಾಗತೀಕ ಮಟ್ಟದಲ್ಲಿಯೂ ಮುಂಚೂಣಿಯಲ್ಲಿರುವ ಸಹಕಾರ ಸಂಸ್ಥೆಯಾಗಿದೆ. ದೇಶದಾದ್ಯಂತ 40,000ಕ್ಕೂ ಹೆಚ್ಚು ಸಹಕಾರಿ ಸಂಘಗಳ ಮೂಲಕ ಲಕ್ಷಾಂತರ ರೈತರ ಸ್ವಾಮ್ಯದಲ್ಲಿರುವ ಸಂಪೂರ್ಣ ಸಹಕಾರ ಸಂಸ್ಥೆಯಾದ ಇಫ್ಕೊ ಸಹಕಾರಿ ಸಂಸ್ಥೆಯಿದ ಅಂತಾರಾಷ್ಟ್ರೀಯ ಸಹಕಾರಿ ವರ್ಷ-2025ರ ಅಂಗವಾಗಿ ಬೆಂಗಳೂರಿನಲ್ಲಿ ನಡೆದ ಬೃಹತ್ ಸಹಕಾರಿ ಮತ್ತು ರೈತ ಸಮಾವೇಶದಲ್ಲಿ ರಾಯಚೂರು ಸೇರಿದಂತೆ ಕರ್ನಾಟಕದ ಸುಮಾರು 3,500 ಸಹಕಾರಿಗಳು ಮತ್ತು ರೈತರು ಭಾಗವಹಿಸಿದ್ದರು. ಇಂತಹ ಮಹಾನ್ ವೇದಿಕೆಯಲ್ಲಿ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಕಾರಣೀಕರ್ತರಾದ ಪತಂಗೆ ಜಯವಂತರಾವ್ ಅವರಿಗೆ ಉತ್ತಮ ಸಹಕಾರಿ ಪ್ರಶಸ್ತಿ ಪ್ರದಾನ ಮಾಡಿದ್ದು ಸಂತಸ ತಂದಿದೆ. ಇಂತಹ ಗೌರವಕ್ಕೆ ಪತ್ರಾರಾಗಿ ರಾಯಚೂರು ಜಿಲ್ಲೆಯ ಕೀರ್ತಿ ಹಬ್ಬಿಸಿದ ಪತಂಗೆ ಜಯವಂತರಾವ್ ಅವರಿಗೆ ರಾಯಚೂರು ಒಕ್ಕಲುತನ ಹುಟ್ಟುವಳಿ ಮಾರಾಟ ಹಾಗೂ ಸಂಸ್ಕರಣ ಸಹಕಾರ ಸಂಘದ ಆಡಳಿತ ಮಂಡಳಿ ಹಾಗೂ ಸಿಬ್ಬಂದಿಯು ಅಭಿನಂದಿಸುತ್ತಿದೆ ಎಂದು ಸಂಘದ ಉಪಾಧ್ಯಕ್ಷರಾದ ಶಶಿಧರ ಪಾಟೀಲ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮನೆ ಎಂದರೆ ಎಲ್ಲಾರಿಗೂ ಇಷ್ಟ



ಕೋಗಿಲು ಎಂಬಲ್ಲಿ ವಾಸಿಸುವ ನಿವಾಸಿಗಳ ಶೆಡ್,ತಗಡು,ಟೆಂಟ್ ಮನೆಗಳನ್ನು ಬುಲ್ಡೋಜರ್ ಯಿಂದ ನೆಲಸಮಗೊಳಿಸಿದರು.ಅಲ್ಲಿನ ನಿವಾಸಿಗಳು ದಿಕ್ಕು ತೋಚದೇ ಕೈಗೆ ಸಿಕ್ ಅಳಿದುಳಿದ ಸಾಮಾನುಗಳನ್ನು ಹೊತ್ತು ಮುಂದಕ್ಕೆ ದಾರಿ ತೋಚದೆ ಕಂಗಾಲಾಗಿದ್ದಾರೆ.

ಈ ಜಗತ್ತಿನಲ್ಲಿ ಪ್ರತಿಯೊಬ್ಬರಿಗೂ ಮನೆ ಎಂದರೆ ತುಂಬಾ ಇಷ್ಟ.ಮನೆ ಎಂದರೆ ಇಷ್ಟ ಇಲ್ಲದವರು ಯಾರು ಇಲ್ಲ ಈ ಜಗತ್ತಿನಲ್ಲಿ.ಈ ಭೂಮಿಯ ಮೇಲೆ ಹುಟ್ಟಿದ ಪ್ರತಿಯೊಬ್ಬರಿಗೂ ಪ್ರತಿ ಜೀವಿಗೂ ಒಂದು ಮನೆಯಂತೂ ಇರುತ್ತದೆ.ಅದು ಕಚ್ಚಾ ಆಗಲಿ, ಪಕ್ಕಾ ಆಗಲಿ.ಇರುವೆಗೂ ಒಂದು ಮನೆಯುಂಟು.ಗುಬ್ಬಚಿಗೂ ಒಂದು ಮನೆಯುಂಟು. ಖಗಮಿಗಗಳಿಗೂ ಮನೆಯುಂಟು.ವಿಷಕಾರುವ,ಕಾರದೇ ಇರುವ ಹಾವುಗಳಿಗೂ ಮನೆಯುಂಟು.ಕ್ರಿಮಿಕೀಟಗಳಿಗೂ ಮನೆಯುಂಟು.

ಮನೆ ಎಂದರೆ ಅದೊಂದು ಜೀವನ,ಅದೊಂದು ಬದುಕು.ಅದೊಂದು ಬಂಧುತ್ವ.ಒಂದು ಕುಟುಂಬ.ಅದೊಂದು ಮಾಸದ ನೆನಪು.ಅದೊಂದು ಗತ.ಅದೊಂದು ಅಸ್ತಿತ್ವ.ನಾವು ವಾಸಿಸುವ ಆ ಮನೆಗೂ ನಮಗೂ ಅವಿನಾಭಾವ ಸಂಬಂಧ ಇರುತ್ತದೆ. ಆ ಮನೆಯಲ್ಲಿ ಅದೆಷ್ಟೋ ಜೀವಗಳು ಬದುಕಿ ಅಳಿದು ಹೋಗಿರುತ್ತವೆ. ಆ ಮನೆಯನ್ನು ನೋಡಿದರೇನೆ ಸಾಕು.ಅಲ್ಲಿ ವಾಸಿಸಿದ್ದ ಪ್ರತಿಯೊಂದು ಜೀವದ ಮುಖಗಳು,ಹಾಗೆಯೇ ಕಣ್ಣ ಮುಂದೆ ಬಂದು ಹೋಗುತ್ತವೆ. ಇದು ನನ್ನ ಮುತ್ತಜ್ಜ, ಅಜ್ಜ,ನನ್ನ ಅಪ್ಪ ಅಮ್ಮ ಇದ್ದಂತಹ ಮನೆ ಎಂದೆಲ್ಲಾ ನೆನಪುವಾಗುತ್ತವೆ.

ಒಂದು ಮನೆಯಲ್ಲಿ ಇದ್ದಷ್ಟು ದಿನ ಇರುತ್ತೇವೆ.ಬಾಳುತ್ತೇವೆ.ಮನೆಯನ್ನು ನಮ್ಮ ಕನಸುಗಳಂತೆ ಬದಲಾಯಿಸಿಕೊಳ್ಳುತ್ತೇವೆ. ಅದು ಹರಕು ಮುರುಕು ಗುಡಿಸಲೇ ಇರಲಿ,ಹತ್ತಾರು,ನೂರಾರು ಅಂತಸ್ತುಗಳ ಕಾಂಕ್ರೀಟು ಬಂಗಲೆ ಇರಲಿ.ಅದು ಮನೆಯೇ ಸರಿ.ಕಾಲ ಬದಲಾದಂತೆ,ಜೀವನ ಬದಲಾದಂತೆ,ಬದುಕು ಬದಲಾದಂತೆ ಆಸ್ತಿ ಐಶ್ವರ್ಯ ಬದಲಾದಂತೆಲ್ಲಾ ಜೀವನಕ್ರಮಗಳು,ಜೀವನಚಕ್ರದಲ್ಲಿ ಬದಲಾಗುತ್ತಾ ಹೋಗುತ್ತವೆ.

ಒಬ್ಬ ಪರಿಚಿತ ವ್ಯಕ್ತಿಯನ್ನು ಒಂದೊಂದು ಸಮಯದಲ್ಲಿ ಮರೆಯಬಹುದು.ಆದರೆ ಒಂದು ಮನೆಯನ್ನು ಮಾತ್ರ ಮರೆತು ಬಿಡಲು ಸಾಧ್ಯವೇ ಇಲ್ಲ.ಅಲ್ಲೆಲ್ಲಾ ನಾವು ಜೀವಿಸಿದ ಉಸಿರಾಡಿದ ಶ್ವಾಸ ಇರುತ್ತದೆ.ನಾವು ಬೆರೆತ ಜೀವಗಳ ಕಾಳಜಿ,ಕಳಕಳಿ,ವಾತ್ಸ ಲ್ಯ,ಪ್ರೀತಿ,ಪ್ರೇಮ,ಎಲ್ಲವೂ ಪ್ರತಿ ಸಮ್ಮಿಳಿತಗೊಂಡಿರುತ್ತವೆ. ಸುಮಾನಿಯಂತಹ,ಪ್ರವಾಹಗಳಿಂದ ಕೊಚ್ಚಿಕೊಂಡು ಹೋದರೂ ಸಹಿತ ಅಳಿದುಳಿದ ಮಣ್ಣು ಕಲ್ಲು ಕಟ್ಟಿಗೆ ಮೇಲೆ ಅದೇನೋ ಪ್ರೀತಿ.ಸೆಳೆತ. ಅಯ್ಯೋ ಎಂದು ಗೋಳೋ ಅರಚುತ್ತೇವೆ.ಅಳುತ್ತೇವೆ.ಗೋಳಾಡುತ್ತೇವೆ. ಎದೆಗೆ ಎದೆಗೆ ಹೊಡೆದುಕೊಂಡು ಜೋರಾಗಿ ಕಿರುಚುತ್ತೇವೆ.ದೇವರ ಮೇಲೆ ರೇಗುತ್ತೇವೆ.ಬೈಯುತ್ತೇವೆ.

ಮನೆ ತಂಟೆಗೆ ಬಂದರೆ ಯಾರೂ ಸುಮ್ಮನಿರುವುದಿಲ್ಲ. ಇಂಗ್ಲಿಷ್ನಲ್ಲಿ ಸುಸಿ ಸಿನಿಮಾ ಒಂದು ನೋಡಿದೆ.ಒಂದು ಸುಂದರವಾದ ಬಯಲು ಪ್ರದೇಶದಲ್ಲಿ ಕಟ್ಟಿಗೆಯಿಂದ ಮನೆಯನ್ನು ನಿರ್ಮಿಸಿಕೊಂಡಿರುತ್ತಾನೆ.ಜೊತೆಗೆ ಮುದ್ದಾದ ನಾಯಿ .ಅದಕ್ಕೊಂದು ಚಿಕ್ಕದಾದ ಮನೆಯನ್ನು ಸಹ ನಿರ್ಮಿಸಿರುತ್ತಾನೆ.ಅದರಲ್ಲಿ ನಾಯಕನ ಮೇಲೆ ಪ್ರತಿನಾಯಕ ಸದೆಬಡಿಯಲು ಹವಣಿಸುತ್ತಾನೆ.ಹೊಡೆದಾಡುತ್ತಾ ಹೊಡೆದಾಡುತ್ತಾ ನಾಯಕನ ಮನೆಯನ್ನು ಕೆಡುವುತ್ತಾನೆ.ಅವಾಗ ನಾಯಕನಿಗೆ ಸಿಟ್ಟು ನೆತ್ತಿಗೇರಿ ಪ್ರತಿನಾಯಕನ ಮೇಲೆ ಎರಗುತ್ತಾನೆ.ಮನೆಯ ಎಲ್ಲ ಕಟ್ಟಿಗೆಗಳನ್ನು ಒಂದು ಟ್ರಾಕ್ ಗೆ ತುಂಬಿಕೊಂಡು ತನ್ನ ಪ್ರಯಾಣವನ್ನು ಮಾಡುತ್ತಾನೆ.ಅವನ ಬೆನ್ನು ಹತ್ತಿದ ಪ್ರತಿನಾಯಕ ಹೇಗಾದರೂ ಮಾಡಿ ನಾಯಕನನ್ನು ಕೊಲ್ಲುವ ಪ್ರಯತ್ನ ಮಾಡುತ್ತಾನೆ.ಆದರೆ ವಿಫಲ ಆಗುತ್ತಾನೆ.ನಾಯಕ ಮತ್ತೆ ತನ್ನ ಮನೆಯನ್ನು ಒಂಟಿಯಾಗಿ ನಿರ್ಮಿಸಿಕೊಳ್ಳುತ್ತಾನೆ.ಸಿದ್ಧಗೊಂಡ ಮನೆಯನ್ನು ಒಂದು ಕ್ಷಣ ನಿಟ್ಟುಸಿರು ಬಿಟ್ಟು ನೋಡಿ ಭಾವುಕನಾಗುತ್ತಾನೆ.ಮನೆಯೆಂದರೆ ಯಾರಿಗಿಸ್ಟ ಇಷ್ಟ ಇಲ್ಲ ಹೇಳಿ.

ತಾಯರಾಜ್ ಮರ್ಚಟ್ಹಾಳ್ ರಾಯಚೂರು.



ಗ್ರಾಮೀಣ ಸ್ವಚ್ಛತೆಯಲ್ಲಿ ಘನ ತಾಜ್ಯ ನಿರ್ವಹಣಾ ಸಿಬ್ಬಂದಿಯ ಪಾತ್ರ ಪ್ರಮುಖ : ಶಶಿಕಾಂತ ಶಿವಪೂರೆ

ಬಳ್ಳಾರಿ,ಜ.02-

ಗ್ರಾಮಗಳಲ್ಲಿ ಸ್ವಚ್ಛತೆ ಕಾಪಾಡುವಲ್ಲಿ ಘನ ತಾಜ್ಯ ನಿರ್ವಹಣಾ ಘಟಕದ ವಾಹನ ಚಾಲಕರು ಹಾಗೂ ಸಹಾಯಕ ಮಹಿಳಾ ಸದಸ್ಯರ ಪಾತ್ರ ಅತ್ಯಂತ ಪ್ರಮುಖವಾಗಿದ್ದು, ಸ್ವಚ್ಛತಾ ಕಾರ್ಯವನ್ನು ಆದ್ಯತೆಯಾಗಿ ಪರಿಗಣಿಸಬೇಕು ಎಂದು ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಶಶಿಕಾಂತ ಶಿವಪೂರೆ ಹೇಳಿದರು.

ಮಹಾತ್ಮಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ ಬೆಂಗಳೂರು, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಸಂಜೀವಿನಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ ಬೆಂಗಳೂರು, ಕಿತ್ತೂರುರಾಣಿ ಚೆನ್ನಮ್ಮ ಮಹಿಳಾ ಸ್ವಸಹಾಯ ಸಂಘ, ಹರಪನಹಳ್ಳಿ ಹಾಗೂ ಜಿಲ್ಲಾ ಪಂಚಾಯತ್ ಇವರ ಸಹಯೋಗದಲ್ಲಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಘನ ತಾಜ್ಯ ನಿರ್ವಹಣಾ ಘಟಕಗಳಲ್ಲಿ ಕಾರ್ಯನಿರ್ವಹಿಸುವ ವಾಹನ ಚಾಲಕರು ಹಾಗೂ ಸಹಾಯಕ ಮಹಿಳಾ ಸದಸ್ಯರಿಗಾಗಿ ಜಿಲ್ಲಾ ಸಂಪನ್ಮೂಲ ತರಬೇತಿ ಕೇಂದ್ರದಲ್ಲಿ ಗುರುವಾರ ಆಯೋಜಿಸಿದ್ದ ಮೂರು ದಿನಗಳ ವಸತಿ ಸಹಿತ ಪುನಶ್ಚೇತನ ತರಬೇತಿ ಕಾರ್ಯಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಸಹಾಯಕ ನಿರ್ದೇಶಕ ಬಸವರಾಜ್ ಹಿರೇಮಠ, ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕ ರಾಜೇಂದ್ರ, ಜಿಲ್ಲಾ ವ್ಯವಸ್ಥಾಪಕ ವಿಜಯ್ ಕುಮಾರ್ ಪಿ., ಸಂಪನ್ಮೂಲ ವ್ಯಕ್ತಿಗಳಾದ ಗಣೇಶ್, ಬಳ್ಳಾರಿ ಮತ್ತು ಸಂಡೂರು ತಾಲ್ಲೂಕಿನ ತಾಲ್ಲೂಕು ಕಾರ್ಯಕ್ರಮ ವ್ಯವಸ್ಥಾಪಕರಾದ ಗಂಗಾಧರ ಹಾಗೂ ಸೋಮಶೇಖರ್ ಕೆ., ವಲಯ ಮೇಲ್ವಿಚಾರಕ ಗಂಗಾಧರ ಸ್ವಾಮಿ ಸೇರಿದಂತೆ ಜಿಲ್ಲಾ ಪಂಚಾಯತ್ ಸಿಬ್ಬಂದಿ ಉಪಸ್ಥಿತರಿದ್ದರು.

ಇದೇ ವೇಳೆ ಬಳ್ಳಾರಿ ಮತ್ತು ಸಂಡೂರು ತಾಲ್ಲೂಕಿನ ಘನ ತಾಜ್ಯ ನಿರ್ವಹಣಾ ಘಟಕದ ವಾಹನ ಚಾಲಕರು ಹಾಗೂ ಸಹಾಯಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕಲ್ಯಾಣ ಕರ್ನಾಟಕದಲ್ಲಿಯೇ ಭಾಲ್ಕಿಯನ್ನು ಮಾದರಿ ಪಟ್ಟಣವನ್ನಾಗಿ ಮಾಡುವುದು ನಮ್ಮ ಗುರಿ : ಸಚಿವ ಈಶ್ವರ್ ಖಂಡ್ರೆ



ಭಾಲ್ಕಿ,ಜ.02-

ತಾಲೂಕು ಸೇರಿದಂತೆ ಭಾಲ್ಕಿ ಪಟ್ಟಣವನ್ನು ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿಯೇ ಮಾದರಿ ನಗರವನ್ನಾಗಿ ರೂಪಿಸುವ ಗುರಿ ನಮ್ಮದಾಗಿದೆ ಎಂದು ಕ್ಷೇತ್ರದ ಶಾಸಕ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ್ ಖಂಡ್ರೆ ಅವರು ಹೇಳಿದರು.

ಪಟ್ಟಣದ ಗುರು ಕಾಲೋನಿಯ ಮಹಾದೇವ ಮಂದಿರದಲ್ಲಿ ಬುಧವಾರ ನಡೆದ ಕಾರ್ಯಕ್ರಮ ದಲ್ಲಿ ಭಾಲ್ಕಿ ಪಟ್ಟಣದ 10 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಗುರು ಕಾಲೋನಿಯ ಮಹಾದೇವ ಮಂದಿರದ ತೋಟದ ಕಾಂಪೌಂಡ್ ಗೋಡೆ ನಿರ್ಮಾಣಕ್ಕೆ 10 ಲಕ್ಷ ರೂ. ಹಾಗೂ ಪಕ್ಕದ ರಸ್ತೆಗಳ ಅಭಿವೃದ್ದಿಗೆ 25 ಲಕ್ಷ ರೂ. ಅನುದಾನ ನೀಡಲಾಗಿದೆ ಎಂದು ತಿಳಿಸಿದರು.

ಲೆಕ್ಚರರ್ ಕಾಲೋನಿ, ಗುರು ಕಾಲೋನಿಗಳು ಜಿಲ್ಲೆಯಲ್ಲಿಯೇ ಮಾದರಿ ಕಾಲೋನಿಗಳಾಗಿ ಅಭಿವೃದ್ಧಿ ಪಡಿಸುವ ನಿಟ್ಟನಲ್ಲಿ ಕಾಮಗಾರಿಗಳನ್ನು ಮಾಡಲಾಗುತ್ತಿದೆ ಎಂದು ತಿಳಿಸಿದ ಅವರು, 2024-25ನೇ ಸಾಲಿನ ವಿಶೇಷ ಯೋಜನೆಯ ಅಡಿಯಲ್ಲಿ 1.45 ಕೋಟಿ ರೂ. ವೆಚ್ಚದಲ್ಲಿ ವಾರ್ಡ್ ಸಂಖ್ಯೆ 1 ರಿಂದ 9 ರಲ್ಲಿ ಕಾಂಕ್ರಿಟ್ ಚರಂಡಿ, ರಸ್ತೆ ನಿರ್ಮಾಣ, 2 ಕೋಟಿ ರೂ. ವೆಚ್ಚದಲ್ಲಿ ವಾರ್ಡ್ ಸಂಖ್ಯೆ 10,11, 12,13 ಮತ್ತು 14 ರಲ್ಲಿ ಸಿಸಿ ರಸ್ತೆ, ಚರಂಡಿ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿದರು.

ವಾರ್ಡ್ ಸಂಖ್ಯೆ 15,16,17 ಮತ್ತು 18 ರಲ್ಲಿ 40 ಲಕ್ಷ ರೂ. ಸಿಸಿ ರಸ್ತೆ, ಚರಂಡಿ ನಿರ್ಮಾಣ ಮತ್ತು ವಾರ್ಡ್ ಸಂಖ್ಯೆ 19,20 ಮತ್ತು 21 ರಲ್ಲಿ 1.30 ಕೋಟಿ ರೂ. ವೆಚ್ಚದಲ್ಲಿ ಸಿ.ಸಿ.ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಅರಣ್ಯ ನಿಗಮದ ಉಪಾಧ್ಯಕ್ಷ ಹಣಮಂತ ರಾವ್ ಚೌವ್ಹಾಣ, ಪುರಸಭೆ ಮುಖ್ಯಾಧಿಕಾರಿ ಸಂಗಮೇಶ್ ಕಾರಬಾರಿ, ಪುರಸಭೆ ಅಧ್ಯಕ್ಷೆ ಶಶಿಕಲಾ ಸಿಂಧನಕೆರೆ, ಪುರಸಭೆ ಮಾಜಿ ಅಧ್ಯಕ್ಷ ಬಸವರಾಜ್ ವಂಕೆ, ರಾಹುಲ್ ಪೂಜಾರಿ, ಸಹಾಯಕ ಆಯುಕ್ತ ಪ್ರಕಾಶ್ ಕುದರಿ, ಓಣಿಯ ಪ್ರಮುಖರಾದ ನ್ಯಾಯವಾದಿ ಉಮಾಕಾಂತ್ ವಾರದ್, ರಮೇಶ್ ಗೊನ್ನಾಳೆ, ಬಾಲರಾಜ್ ಕುಂಬಾರ, ಬಸವರಾಜ್ ಕುರುಬಖೇಳಗೆ, ಅಶೋಕ್ ಬಾವುಗೆ, ಮಂಗಲಾ ಟೀಚರ್, ಪುರಸಭೆ ಉಪಾಧ್ಯಕ್ಷ ವಿಜಯಕುಮಾರ ರಾಜಭವನ್, ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷ ಅಧ್ಯಕ್ಷ ಜಯರಾಜ್ ದಾಬಶೆಟ್ಟಿ ಉಪಸ್ಥಿತರಿದ್ದರು.

ಬಳ್ಳಾರಿ ನೂತನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ಎಸ್ ಪಿ ಪವನ್ ನೆಜ್ಜೂರ್ ಅವರಿಗೆ ಶುಭ ಹಾರೈಕೆ



ಸಿರುಗುಪ್ಪ - ಬಳ್ಳಾರಿ ಜಿಲ್ಲೆಯ ವರಿಷ್ಠಾಧಿಕಾರಿಯಾಗಿ ಎಸ್ ಪಿ ನೂತನ ಪೊಲೀಸ್ ಪವನ್ ನೆಜ್ಜೂರ್ ಅವರು ಹೊಸ ವರ್ಷದ ಮೊದಲ ದಿನ ಗುರುವಾರ ಅಧಿಕೃತವಾಗಿ ಬಳ್ಳಾರಿ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯಲ್ಲಿ ಎಸ್ ಪಿ ಡಾ ಶೋಭಾ ರಾಣಿ ಅವರು ನೂತನ ಎಸ್ ಪಿ ಪವನ್ ನೆಜ್ಜೂರ್ ಅವರಿಗೆ ಅಧಿಕಾರ ಹಸ್ತಾಂತರಿಸಿದ ಅಧಿಕೃತವಾಗಿ ಸ್ವೀಕರಿಸಿದರು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಬಳ್ಳಾರಿ ಜಿಲ್ಲಾ ಕಾರ್ಯಕಾರಿ ಸಾಕ್ಷರತಾ ಸಮಿತಿ ಶಾಂತಿ ಸಭೆ ಸದಸ್ಯರು ಜನಾಭಿಪ್ರಾಯ ಮುಖಂಡರು ಸಮಾಜ ಸುಧಾರಕ ಅಬ್ದುಲ್ ನಬಿ ಅವರು ನೂತನ ಎಸ್ ಪಿ ಪವನ್ ನೆಜ್ಜೂರ್ ಅವರ ಯಶಸ್ಸಿ ಗೆ ದೊರೆತಿರುವ ಗೌರವಕ್ಕೆ ಅಭಿನಂದಿಸಿ ಹೊಸ ವರ್ಷದ ಶುಭಾಶಯ ಹಾರೈಸಿದರು.



ಭೀಮಾ ಕೋರೆಂಗಾವ್ ಯುದ್ದ ದಲಿತರ ಸ್ವಾಭಿಮಾನಕ್ಕಾಗಿ ರಕ್ತ ಹರಿಸಿದ ಸುದಿನವಾಗಿದೆ : ಅರಳಿಗನೂರು

ಕನಕಗಿರಿ,ಜ.02-

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ 208ನೇ ಭೀಮಾ ಕೋರೆಂಗಾವ್ ವಿಜಯೋತ್ಸವ ಕಾರ್ಯಕ್ರಮವನ್ನು ಗುರುವಾರ ಆಚರಿಸಲಾಯಿತು.

ದಲಿತ ಮುಖಂಡ ಪ್ರಗತಿಪರ ಹೋರಾಟಗಾರ ಪಾಮಣ್ಣ ಅರಳಿಗನೂರು ಮಾತನಾಡಿ, ಭೀಮಾ ಕೋರೆಂಗಾವ್ ಯುದ್ದ ದಲಿತರ ಸ್ವಾಭಿಮಾನಕ್ಕಾಗಿ ರಕ್ತ ಹರಿಸಿದ ಸುದಿನವಾಗಿದೆ. ಸಮಾಜದಲ್ಲಿ ಬೇರೂರಿದ್ದ ಅಸಮಾನತೆ, ಅಸ್ಪೃಶ್ಯತೆ, ಮೂಡನಂಬಿಕೆಗಳ ವಿರುದ್ದ ಹೋರಾಡಿ ವಿಜಯ ಸಾಧಿಸಿದ ವಿಜಯದ ದಿನ ಭೀಮಕೋರೆಂಗಾವ್ ಯುದ್ದವಾಗಿದೆ ಎಂದರು.

ಪಟ್ಟಣ ಪಂಚಾಯತ್ ಹಂಗಾಮಿ ಅಧ್ಯಕ್ಷ ಕಂಠಿ ರಂಗ ನಾಯಕ, ಸದಸ್ಯರಾದ ಶೇಷಪ್ಪ ಪೂಜಾರ, ಹನುಮಂತ ಬಸರಿಗಿಡ, ತಹಶೀಲ್ದಾರ ವಿಶ್ವನಾಥ ಮುರುಡಿ, ಬಿಜೆಪಿ ಮಂಡಲ ಅಧ್ಯಕ್ಷ ಸಣ್ಣ ಕನಕಪ್ಪ, ದಲಿತ ಮುಖಂಡರಾದ ಲಿಂಗಪ್ಪ ಪೂಜಾರ, ನಾಗೇಶ ಪೂಜಾರ, ನೀಲಕಂಠ ಬಡಿಗೇರ, ಯುವ ಮುಂದಾಳು ಅನ್ನು ಚಳ್ಳಮರದ್ ಇದ್ದರು.

ರಾಯಚೂರು: ಎಲ್.ಬಿ.ಎಸ್ ನಗರದಲ್ಲಿ ಕುಡಿಯುವ ನೀರಿನ ತೀವ್ರ ಸಮಸ್ಯೆ - ಪೈಪ್ಲೈನ್ ಅಳವಡಿಕೆಗೆ ನಿವಾಸಿಗಳ ಆಗ್ರಹ

ಹಿತದೃಷ್ಟಿಯಿಂದ ಮಹಾನಗರ ಪಾಲಿಕೆ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಂಡು ಅಗತ್ಯ ಪೈಪ್ಲೈನ್ ಅಳವಡಿಸಿ, ಕುಡಿಯುವ ನೀರಿನ ಸಮಸ್ಯೆಯನ್ನು ಶೀಘ್ರವಾಗಿ ಪರಿಹರಿಸಬೇಕೆಂದು ಎಲ್.ಬಿ.ಎಸ್ ನಗರದ ನಿವಾಸಿಗಳು ಒತ್ತಾಯಿಸಿದ್ದಾರೆ. ಈ ಸಂದರ್ಭದಲ್ಲಿ: ಎಂ.ಡಿ. ಗೌಸ್ ಮುಲ್ಲಾ, ಮಹಾದೇವ್, ಅಕೀಬ್ ಪಾಷಾ, ಫಯಾಜ್,ರಿಯಾಝ್, ನಾಗರಾಜ್,ದಿಲೀಪ್,ಮಲ್ಲು. ಇದ್ದರು

ಅರುಣಾಂಶು ಗಿರಿ ಅವರು ರಾಯಚೂರು ಜಿಲ್ಲೆಯ ನೂತನ ಪೊಲೀಸ್ ವರಿಷ್ಠಾಧಿಕಾರಿಯಾಗಿ ನೇಮಕ

ಕಾರಿಯಾಗಿಯೂ ಕಾರ್ಯನಿರ್ವಹಿಸಿದ್ದರು.

ರಾಯಚೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿದ್ದ ಎಂ.ಪುಟ್ಟಮಾದಯ್ಯ ಅವರಿಗೆ ಕಲಬುರಗಿಯ ಪಿಟಿಸಿ (ಪೊಲೀಸ್ ತರಬೇತಿ ಕೇಂದ್ರ) ಪ್ರಾಂಶುಪಾಲರಾಗಿ ಡಿಐಜಿಪಿ ಹುದ್ದೆಗೆ ಮುಂಬಡ್ತಿ ನೀಡಲಾಗಿದೆ.

ಬೀಳ್ಕೊಡುಗೆ ಸಮಾರಂಭ : ಪುಟ್ಟಮಾದಯ್ಯ ಅವರಿಗೆ ಮುಂಬಡ್ತಿ ದೊರೆತ ಹಿನ್ನೆಲೆಯಲ್ಲಿ ಗುರುವಾರ ರಾಯಚೂರು ಜಿಲ್ಲಾ ಪೊಲೀಸ್ ಮುಖ್ಯಾಲಯದಲ್ಲಿ ಬೀಳ್ಕೊಡುಗೆ ಸಮಾರಂಭ ನಡೆಯಿತು. ಈ ಸಂದರ್ಭದಲ್ಲಿ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ಹರಿಶ್ ಹಾಗೂ ಕುಮಾರಸ್ವಾಮಿ ಅವರು ಪುಟ್ಟಮಾದಯ್ಯ ಅವರಿಗೆ ಶಾಲು ಹೊದಿಸಿ ಸನ್ಮಾನಿಸಿದರು.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ನಿಮ್ಮೂರು ಸುದ್ದಿ

ಸಂಪಾದಕೀಯ

ಕಾಲಮಾನ ಭಾರತದಲ್ಲಿ ನ್ಯಾಯ ಪ್ರಧಾನತೆ-ಕೆಲವು ಬೆಳವಣಿಗೆಗಳತ್ತ ಒಂದು ನೋಟ

ಒಂದೆಡೆ ಕೋರ್ಟ್‌ಗಳು ಜೀವಾವಧಿ ಶಿಕ್ಷೆಯಲ್ಲಿರುವವರಿಗೆ, ಅತ್ಯಾಚಾರಿಗಳಿಗೆ ಜಾಮೀನು ನೀಡುತ್ತಿದ್ದರೆ, ಇನ್ನೊಂದೆಡೆ ಐದು ವರ್ಷಗಳಿಂದ ಜೈಲಿನಲ್ಲಿರುವ ಉಮರ್ ಖಾಲಿದ್‌ಗೆ ಒಂದಲ್ಲ ಒಂದು ಕಾರಣದಿಂದ ಜಾಮೀನು ನಿರಾಕರಿಸಲಾಗುತ್ತಿದೆ!

ಮೊದಲು ಈ ಬರಹದ ಶೀರ್ಷಿಕೆಗೆ ಸಂಬಂಧಿಸಿದಂತೆ ಎದುರಿಸಿದ ಒಂದು ಸಂಗತಿಯ ಬಗೆಗೆ ಪ್ರಸ್ತಾಪಿಸುತ್ತೇನೆ. ನಮ್ಮಲ್ಲಿ ಕುರಿತಂತೆ ಇರುವ ಕೆಲವು ವಿಷಯಗಳತ್ತ ಗಮನವನ್ನು ಹರಿಸುವುದು ಈ ಬರಹದ ಉದ್ದೇಶ. ಈ ಅನ್ನು ಕನ್ನಡದಲ್ಲಿ ನ್ಯಾಯದಾನ, ನ್ಯಾಯ ವಿತರಣೆ ಅಥವಾ ನ್ಯಾಯ ನೀಡುವಿಕೆ ಎಂದು ಅನುವಾದಿಸಬಹುದೆಂದು ತೋರಿದ್ದರೂ, ನ್ಯಾಯ ಪ್ರಧಾನತೆ ಎಂಬ ಪದಗಳನ್ನು ಬಳಸಲಾಗಿದೆ! ಈ ಬರಹಗಾರನಿಗೆ ಕಾನೂನು ಇತ್ಯಾದಿ ಸಂಬಂಧಿತ ವಿಚಾರಗಳ ಬಗೆಗೆ ಆಳವಾದ ಪಾಂಡಿತ್ಯ ಅಥವಾ ತಿಳಿವಳಿಕೆ ಇಲ್ಲ! ಇಲ್ಲಿ ನಮ್ಮ ನ್ಯಾಯವ್ಯವಸ್ಥೆ ಕುರಿತಂತೆ ಕೆಲವು ವಿದ್ಯಮಾನಗಳನ್ನು ಸಾಮಾಜಿಕ ಕಾರ್ಯಕರ್ತನ ನೆಲೆಯಿಂದ ಚರ್ಚಿಸಲು ಪ್ರಯತ್ನಿಸಲಾಗಿದೆ.

ಈತ ಒಬ್ಬ ಸ್ವಯಂ ಘೋಷಿತ ದೇವ ಮಾನವ! 2013ರಲ್ಲಿ ಅಸ್ಸಾ ಮಿನ ಸುಮಾರು 16 ವರ್ಷಗಳ ಹುಡುಗಿಯ ಮೇಲೆ ತನ್ನ ಜೋಧ್‌ಪುರದ ಆಶ್ರಮದಲ್ಲಿ ಅತ್ಯಾಚಾರವನ್ನು ಎಸಗಿದ ಎಂಬ ಆಪಾದನೆಯನ್ನು ಎದುರಿಸಿದ. ನಂತರ ಗುಜರಾತಿನ ಇಬ್ಬರು ಸಹೋದರಿಯರು ಇದೇ ಆಪಾದನೆಯನ್ನು ಮಾಡಿದರು. 2008ರಲ್ಲಿ ಗುಜರಾತಿನ ಅಹಮದಾಬಾದಿನ ಮೊತೆರಾದ ಈತನ ಆಶ್ರಮದ ಸಮೀಪ ಇಬ್ಬರು ಮಕ್ಕಳ ವಿರೂಪಗೊಂಡ ದೇಹಗಳು ಪತ್ತೆಯಾದವು. 2001-2006ರ ಅವಧಿಯಲ್ಲಿ ಮೊತೆರಾ ಆಶ್ರಮದಲ್ಲಿ ಈತ ಒಬ್ಬ ಮಹಿಳಾ ಭಕ್ತೆಯ ಮೇಲೆ ಸತತವಾಗಿ ಅತ್ಯಾಚಾರವನ್ನು ಎಸಗಿದ ಎಂಬ ಆಪಾದನೆಗೆ ಒಳಗಾದ. ಅಲ್ಲದೆ ಈತನ ಮೇಲೆ ಇನ್ನು ಹಲವು ಅಪರಾಧಗಳ ಆಪಾದನೆಗಳು ಕೇಳಿ ಬಂದವು.

ಅತ್ಯಾಚಾರ ಪ್ರಕರಣಗಳಿಗೆ ಸಂಬಂಧಿಸಿದಂತೆ, ಆಸಾರಾಮ ಬಾಪುಗೆ 2018 ಮತ್ತು 2023ರಲ್ಲಿ ಎರಡು ಬಾರಿ ಜೀವಾವಧಿ ಶಿಕ್ಷೆಯನ್ನು ನೀಡಲಾಗಿದೆ. ಆದರೆ ಅಕ್ಟೋಬರ್ 31, 2025 ಮತ್ತು ನವೆಂಬರ್ 5, 2025ರಂದು ಕ್ರಮವಾಗಿ ರಾಜಸ್ಥಾನ ಮತ್ತು ಗುಜರಾತ್ ಹೈ ಕೋರ್ಟ್‌ಗಳು ಈತನಿಗೆ ಆರೋಗ್ಯ ಕ್ಷೀಣಿಸುತ್ತಿರುವ ಕಾರಣದಿಂದ ಆರು ತಿಂಗಳ ಶಿಕ್ಷೆಯ ಅಮಾನತ್ತು/ಮಧ್ಯಂತರ ಬೇಲನ್ನು ನೀಡಿವೆ! ಇದನ್ನು ಈತನಿಂದ ಅತ್ಯಾಚಾರಕ್ಕೆ ಒಳಗಾದ ಒಬ್ಬ ಅಪ್ರಾಪ್ತ ವಯಸ್ಸಿನ ಹುಡುಗಿ ಸುಪ್ರೀಂ ಕೋರ್ಟಿನಲ್ಲಿ ಚಾಲೆಂಜ್ ಮಾಡಿದ್ದಾಳೆ.

2012ರ ನಿರ್ಭಯಾ ಅತ್ಯಾಚಾರದ ಪ್ರಕರಣಕ್ಕೆ ಸಂಬಂಧಿಸಿದಂತೆ, ಈ ದುಷ್ಕರ್ಮಿ ಬಾಬಾ ತನ್ನ ಒಂದು ಪ್ರವಚನದಲ್ಲಿ ಹೀಗೆ ಹೇಳಿದ: ''ಅತ್ಯಾಚಾರವನ್ನು ಪ್ರತಿರೋಧಿಸುವುದರ ಬದಲು ಆಕೆ ತನ್ನ ಅತ್ಯಾಚಾರಿಗಳನ್ನು ತನ್ನನ್ನು ಬಿಟ್ಟುಬಿಡುವಂತೆ ವಿನಂತಿಸಬೇಕಿತ್ತು. ಆಕೆ ಅವರನ್ನು ತನ್ನ ಸಹೋದರರಂತೆ ಕಾಣಬೇಕಿತ್ತು. ಹೀಗೆ ಮಾಡಿದ್ದರೆ ಆಕೆಯ ಜೀವ ಉಳಿಯುತ್ತಿತ್ತು''. ಅಲ್ಲದೆ ಈತ ಮುಂದುವರೆಯುತ್ತ, ''ಗಲ್ತಿ ಏಕ್ ತರಫ್ ಸೆ ನಹಿ ಹೋತಾ ಹೈ'' ಎಂದೂ ಹೇಳಿದ! ಈತನ ಮಗ ನಾರಾಯಣ್ ಸಾಯಿ ಸಹ ಅತ್ಯಾಚಾರಗಳನ್ನು ಮಾಡಿದ್ದಕ್ಕೆ ಜೈಲಿನ ಕಂಬಿಗಳನ್ನು ಎಣಿಸುತ್ತಿದ್ದಾನೆ.

ಈತ ಡೇರಾ ಸಚ್ಚಾ ಸೌಧ ಎಂಬ ಹರಿಯಾಣ ಮೂಲದ ಒಂದು ಆಧ್ಯಾತ್ಮಿಕ ಸಂಸ್ಥೆಯ ಮುಖ್ಯಸ್ಥ. ಪ್ರವಚನಗಳ ಜೊತೆ ಈತ ಸಿನಿಮಾಗಳಲ್ಲಿ, ನಾಟಕಗಳಲ್ಲಿ ನಟಿಸಿದ್ದಾನೆ. ಆಗಸ್ಟ್ 2017ರಲ್ಲಿ ಎರಡು ಅತ್ಯಾಚಾರ ಪ್ರಕರಣಗಳಲ್ಲಿ ಈತ ದೋಷಿ ಎಂದು ಕೋರ್ಟ್ ತೀರ್ಪನ್ನು ನೀಡಿತು. ಇದರ ಪರಿಣಾಮವಾಗಿ ಹರಿಯಾಣದ ಕೆಲವು ಪ್ರದೇಶಗಳಲ್ಲಿ ಮತ್ತು ನಮ್ಮ ದೇಶದ ರಾಜಧಾನಿ ದೆಹಲಿಯಲ್ಲಿ ಈತನ ಅನುಯಾಯಿಗಳು ಹಿಂಸಾ ಕೃತ್ಯಗಳಲ್ಲಿ ತೊಡಗಿದರು! ಅಲ್ಲದೆ ತನ್ನ ಇಬ್ಬರು ಅನುಯಾಯಿಗಳು ಮತ್ತು ಒಬ್ಬ ಪತ್ರಕರ್ತನ ಹತ್ಯೆಯಲ್ಲಿ ಈತನ ಕೈವಾಡವೂ ಇತ್ತೆಂಬ ಆಪಾದನೆಯೂ ಇತ್ತು. ಈ ಕಾರಣದಿಂದ ಈತನಿಗೆ ಜೀವಾವಧಿ ಶಿಕ್ಷೆಯೂ ಆಯಿತು.

ಆದರೆ, ನಂತರದ ಕಾಲದಲ್ಲಿ, ಚುನಾವಣೆಗಳ ಸಂದರ್ಭಗಳಲ್ಲಿ, ಈ ಅತ್ಯಾಚಾರಿ ದೇವ ಮಾನವನಿಗೆ ಅನೇಕ ದಿನಗಳ ಪೆರೋಲ್ () ಸಿಗುತ್ತಿದೆ. ಏಕೆಂದರೆ ಸುಮಾರು ಐದು ಉತ್ತರದ ರಾಜ್ಯಗಳಲ್ಲಿ ಈತನಿಗೆ ಅಪಾರ ಸಂಖ್ಯೆಯ ಅನುಯಾಯಿಗಳಿದ್ದಾರೆ. ಈ ರಾಜ್ಯಗಳ ಆಡಳಿತಾರೂಢ ಬಿಜೆಪಿಗೂ ಈತನಿಗೂ ನಿಕಟ ಸಂಪರ್ಕವಿದೆ ಎಂಬುದು ರಹಸ್ಯದ ವಿಚಾರವಲ್ಲ!

ಉತ್ತರ ಪ್ರದೇಶದ ದಾದ್ರಿಯಲ್ಲಿ 2015ರ ಸೆಪ್ಟಂಬರ್ 28ರಂದು ಸುಮಾರು 52 ವರ್ಷದ ಕಮ್ಮಾರ ಮೊಹಮ್ಮದ್ ಅಖ್ಲಾಖ್‌ನ ಮೇಲೆ ಇಟ್ಟಿಗೆ ಮತ್ತು ರಾಡ್‌ಗಳಿಂದ ಒಂದು ಉದ್ರಿಕ್ತ ಗುಂಪು ಆಕ್ರಮಣ ಮಾಡಿ ಆತನನ್ನು ಹತ್ಯೆ ಮಾಡಿತು. ಅಖ್ಲಾಖ್ ಹಸುವಿನ ಮಾಂಸವನ್ನು ತನ್ನ ಮನೆಯ ಫ್ರಿಡ್ಜ್‌ನಲ್ಲಿ ಇಟ್ಟಿದ್ದಾನೆ ಎಂಬ ವದಂತಿಯನ್ನು ಆಧರಿಸಿ ಈ ಆಕ್ರಮಣ ಜರುಗಿತು. ಈ ಘಟನೆಯಲ್ಲಿ ಆತನ ಮಗ ದಾನಿಷ್‌ಗೂ ತೀವ್ರ ಗಾಯಗಳಾಯಿತು. ಆತನಿಗೆ ಅನೇಕ ಶಸ್ತ್ರಚಿಕಿತ್ಸೆಗಳು ನಡೆದವು. ದೇಶಾದ್ಯಂತ ಈ ಹೇಯ ಘಟನೆಯ ವಿರುದ್ಧ ಪ್ರತಿಭಟನೆಗಳು ಜರುಗಿದವು.

ಪ್ರಸ್ತುತ ಒಂದು ದಶಕದ ತರುವಾಯ ಉತ್ತರ ಪ್ರದೇಶದ ಬಿಜೆಪಿ ಸರ್ಕಾರ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹತ್ತು ಆರೋಪಿಗಳ ಮೇಲಿನ ಆಪಾದನೆಗಳನ್ನು ವಾಪಸ್ಸು ಪಡೆದುಕೊಳ್ಳುವುದಾಗಿ ಕೋರ್ಟಿಗೆ ತಿಳಿಸಿತು. ಪ್ರಸ್ತುತ ಈ ಕೇಸ್ ಕುರಿತಂತೆ 14 ಆಪಾದಿತರು ಜಾಮೀನಿನ ಮೇಲಿದ್ದಾರೆ. 2016ರಲ್ಲಿ ರವಿ ಸಿಸೋಡಿಯಾ ಎಂಬ ಆಪಾದಿತ ಜೈಲಿನಲ್ಲಿ ಸತ್ತ. ಆತನಿಗೆ ಸಕಲ ಗೌರವಗಳ ಅಂತ್ಯಕ್ರಿಯೆ ನಡೆಸಲಾಯಿತು. ಆತನ ಶವಪೆಟ್ಟಿಗೆ ಮೇಲೆ ನಮ್ಮ ರಾಷ್ಟ್ರಧ್ವಜವನ್ನು ಹೊದಿಸಲಾಯಿತು! ಡಿಸೆಂಬರ್ 2025ರಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದ ಫಾಸ್ಟ್ ಕೋರ್ಟ್ ಉತ್ತರ ಪ್ರದೇಶ ಸರ್ಕಾರದ ಆಪಾದನೆಗಳ ವಾಪಸ್ಸು ಪಡೆಯುವಿಕೆಯ ಮನವಿಯನ್ನು ತಿರಸ್ಕರಿಸಿತು. ಆಪಾದಿತರ ಪೈಕಿ ಸ್ಥಳೀಯ ಬಿಜೆಪಿ ನಾಯಕ ಸಂಜಯ್ ರಾಣಾನ ಮಗ ವಿಶಾಲ್ ರಾಣಾ ಕೂಡ ಇದ್ದಾನೆ.

ಜೂನ್ 2017ರಲ್ಲಿ ಉತ್ತರ ಪ್ರದೇಶದ ಉನ್ನಾಂವ್‌ನ ಕುಲದೀಪ್ ಸಿಂಗ್ ಸೆಂಗರ್ ಎಂಬ ಶಾಸಕನ ಮನೆಯಲ್ಲಿ ಒಬ್ಬ 17 ವರ್ಷದ ಹುಡುಗಿಯನ್ನು ಈ ಶಾಸಕ ಅತ್ಯಾಚಾರ ಮಾಡಿದ ಎಂದು ಆ ಹುಡುಗಿ ಆಪಾದಿಸಿದಳು. 2018ರ ಏಪ್ರಿಲ್‌ನಲ್ಲಿ ನ್ಯಾಯಾಂಗ ಬಂಧನದಲ್ಲಿ ಇದ್ದ ಅತ್ಯಾಚಾರ ಸಂತ್ರಸ್ತೆಯ ತಂದೆಯನ್ನು ಸೆಂಗರ್‌ನ ಸಹೋದರ ಮತ್ತು ಆತನ ಬೆಂಬಲಿಗರು ಹತ್ಯೆಯನ್ನು ಮಾಡಿದರು ಎಂದು ಆಪಾದಿಸಲಾಯಿತು. ಜುಲೈ 2019ರಲ್ಲಿ ಸಂತ್ರಸ್ತೆ ಪ್ರಯಾಣ ಮಾಡುತ್ತಿದ್ದ ಕಾರ್‌ಗೆ ಟ್ರಕ್ ಗುದ್ದಿತು. ಈ ಅಪಘಾತದಲ್ಲಿ ಆಕೆಯ ವಕೀಲ (ತರುವಾಯ)ಮತ್ತು ಇಬ್ಬರು ಚಿಕ್ಕಮ್ಮಂದಿರು ಪ್ರಾಣವನ್ನು ಕಳೆದುಕೊಂಡರು. ಈ ದುರ್ಘಟನೆಯ ಹಿಂದೆ ಯಾರ ಕೈವಾಡ ಕೆಲಸವನ್ನು ಮಾಡಿತು ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಸೆಂಗರ್ ಪ್ರಸ್ತುತ ಜೀವಾವಧಿ ಶಿಕ್ಷೆಯನ್ನು ಅನುಭವಿಸುತ್ತಿದ್ದಾನೆ. ಇಂದಿಗೂ ಸಂತ್ರಸ್ಥೆಯ ಜೀವಕ್ಕೆ ಬೆದರಿಕೆ ಇದೆ!

ದೆಹಲಿಯ ಹೈ ಕೋರ್ಟ್ 23, 2025ರಂದು ಸೆಂಗರ್‌ನ ಜೀವಾವಧಿ ಶಿಕ್ಷೆಯನ್ನು ಅಮಾನತುಗೊಳಿಸಿ, ಆತನಿಗೆ ಜಾಮೀನನ್ನು ನೀಡಿತು. ಇದನ್ನು ಸಿಬಿಐ ಸುಪ್ರೀಂ ಕೋರ್ಟ್‌ನಲ್ಲಿ ಚಾಲೆಂಜ್ ಮಾಡಿತು. ಡಿಸೆಂಬರ್ 29, 2025ರಂದು ಸುಪ್ರೀಂ ಕೋರ್ಟ್ ಜಾಮೀನು ಆರ್ಡರ್‌ಗೆ ತಡೆಯಾಜ್ಞೆಯನ್ನು ನೀಡಿತು.

ಒಂದೆಡೆ ಕೋರ್ಟ್‌ಗಳು ಈ ಪರಿಯಲ್ಲಿ ಜಾಮೀನುಗಳನ್ನು ನೀಡುತ್ತಿದ್ದರೇ, ಇನ್ನೊಂದೆಡೆ ಐದು ವರ್ಷಗಳಿಂದ ಜೈಲಿನಲ್ಲಿರುವ ಉಮರ್ ಖಾಲಿದ್‌ಗೆ ಜಾಮೀನನ್ನು ಒಂದಲ್ಲ ಒಂದು ಕಾರಣದಿಂದ ನಿರಾಕರಿಸಲಾಗುತ್ತಿದೆ!

ಇಂತಹ ಪರಿಸ್ಥಿತಿಯಲ್ಲಿದೆ ನಮ್ಮ ನ್ಯಾಯಂಗ ವ್ಯವಸ್ಥೆ. ಎಲ್ಲ ಬಗೆಯಲ್ಲಿ ಪ್ರಬಲರಾದವರಿಗೆ ನ್ಯಾಯ ದೊರಕಿ, ದುರ್ಬಲರಿಗೆ ಅದು ಮರೀಚಿಕೆಯಾಗುತ್ತಿದೆ ಎಂಬ ವಿಷಯ ಸಾರ್ವಜನಿಕ ವಲಯದಲ್ಲಿ ಚರ್ಚೆಯ ವಿಷಯವಾಗಿದೆ.

ಅಲ್ಪಸಂಖ್ಯಾತರನ್ನು ಹೊರಹಾಕುವುದೇ ಸೂಕ್ತ ಎಂದು ಪ್ರತಿಪಾದಿಸುತ್ತದೆ ಆರೆಸ್ಸೆಸ್ ಸಿದ್ಧಾಂತ



ದಿ ಕ್ಯಾರವಾನ್ ನಡೆಸಿದ ಕುರಿತ ವಿಶೇಷ ತನಿಖಾ ವರದಿಯ ಅನುವಾದ ಮಾಲಿಕೆ ಆರು ಕಂತುಗಳಲ್ಲಿ ಈ ದಿನ ದಲ್ಲಿ ಪ್ರಕಟವಾಗಲಿದೆ. ಮೊದಲ ಮೂರು ಕಂತುಗಳು ಈಗಾಗಲೇ ಪ್ರಕಟವಾಗಿವೆ. ಇಲ್ಲಿದೆ ನಾಲ್ಕನೇ ಕಂತು.

ಅತ್ಯಂತ ಮುಖ್ಯವಾದ ಸಂಗತಿಯೆಂದರೆ, ತಾನು ಏನಾಗಿದ್ದೇನೆ ಮತ್ತು ತನ್ನನ್ನು ತಾನು ಹೇಗೆ ನೋಡಿಕೊಳ್ಳುತ್ತೇನೆ ಎಂಬ ಬಗ್ಗೆ ಸ್ವತಃ ಆರ್‌ಎಸ್‌ಎಸ್‌ಗೆ ಮೊದಲಿನಿಂದಲೂ ಸ್ಪಷ್ಟ ಅರಿವಿದೆ. ವಾಸ್ತವವಾಗಿ, ಸಂಘದ ಈ ಜಾರಿಕೊಳ್ಳುವ ತಂತ್ರಗಳಿಗೆ ಮರುಳಾಗದೆ, ಅದರ ಆಂತರಿಕ ಪ್ರಕಟಣೆಗಳಲ್ಲಿ ಅಡಕವಾಗಿರುವ ಸಂದೇಶದ ತಿರುಳನ್ನು ಗಮನಿಸಿದರೆ, ಒಂದೇ ರಾಜಕೀಯ ಘಟಕವಾಗಿ ಅವುಗಳ ನಡುವಿನ ಒಗ್ಗಟ್ಟು ಸ್ಪಷ್ಟವಾಗುತ್ತದೆ.

ಉದಾಹರಣೆಗೆ, ಸಂಘದ ಹಿತೈಷಿ ಕೆ. ಜಯಪ್ರಸಾದ್ ಇದನ್ನು ಸ್ಪಷ್ಟವಾಗಿ ಹೀಗೆ ವಿವರಿಸುತ್ತಾರೆ: ''ಈ ಎಲ್ಲಾ ಸಹವರ್ತಿ ಒತ್ತಡ ಹೇರುವ ಗುಂಪುಗಳು ( ) ಆರ್‌ಎಸ್‌ಎಸ್‌ನಿಂದ ನಿಯಂತ್ರಿಸಲ್ಪಡುತ್ತವೆ. ಈ ಗುಂಪುಗಳಿಗೆ ಎರಡು ಪಾತ್ರಗಳಿವೆ: ಮೊದಲನೆಯದಾಗಿ, ಇವು ಆರ್‌ಎಸ್‌ಎಸ್‌ನ ವಿಚಾರಧಾರೆಗಳನ್ನು ಪ್ರಚಾರ ಮಾಡುತ್ತವೆ; ಎರಡನೆಯದಾಗಿ, ತಮ್ಮ ಸಂಘಟನೆಗಳ ಹಿತಾಸಕ್ತಿಗಳನ್ನು ಕಾಪಾಡುತ್ತವೆ ದೈನಂದಿನ ಚಟುವಟಿಕೆಗಳಲ್ಲಿ ಈ ಸಂಸ್ಥೆಗಳು ತಮ್ಮದೇ ಆದ ನಾಯಕತ್ವ ಮತ್ತು ಹಣಕಾಸಿನೊಂದಿಗೆ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತವೆ. ಆದರೆ ಅಂತಿಮವಾಗಿ ಇವು ಆರ್‌ಎಸ್‌ಎಸ್‌ನ ನಿಯಂತ್ರಣ ಮತ್ತು ಮಾರ್ಗದರ್ಶನದಲ್ಲೇ ಇರುತ್ತವೆ''.

ಅದೇ ರೀತಿ, ಆದಿವಾಸಿ ರಾಜಕಾರಣದೊಂದಿಗೆ ಆರ್‌ಎಸ್‌ಎಸ್‌ಗಿರುವ ಸಂಬಂಧವನ್ನು ಚರ್ಚಿಸುವಾಗ, ಸಂಘದ ವಿಶ್ಲೇಷಕ ಎಂ.ಜಿ. ಚಿತ್ಕಾರ ಅವರು ಹೀಗೆ ಹೇಳುತ್ತಾರೆ: ''ಅದು ಕೇವಲ ಒಂದು ರಾಜಕೀಯೇತರ ಎನ್‌ಜಿಒ ಆಗಿರುವುದಕ್ಕಿಂತ ಹೆಚ್ಚಾಗಿ, ಆದಿವಾಸಿಗಳು ಕ್ರೈಸ್ತ ಧರ್ಮಕ್ಕೆ ಮತಾಂತರವಾಗುವುದನ್ನು ತಡೆಯಲೆಂದೇ ವನವಾಸಿ ಕಲ್ಯಾಣ ಆಶ್ರಮವನ್ನು () ಸ್ಥಾಪಿಸಲಾಯಿತು. ಇತರ ಯಾವುದೇ ಆರ್‌ಎಸ್‌ಎಸ್ ಅಂಗಸಂಸ್ಥೆಯಂತೆಯೇ, ವನವಾಸಿ ಕಲ್ಯಾಣ ಆಶ್ರಮ ಕೂಡ ಆರ್‌ಎಸ್‌ಎಸ್‌ನ ತರಬೇತಿ ಪಡೆದ ಕಾರ್ಯಕರ್ತರಿಂದಲೇ ಸಂಘಟಿಸಿ, ನಡೆಸಲಾಗುತ್ತದೆ.''

ಸಮಾಜದ ಕುರಿತಾದ ಸಾವಯವ ಸಿದ್ಧಾಂತದ ( ) ಕಲ್ಪನೆಯನ್ನು ಸಾಕಾರಗೊಳಿಸುವಲ್ಲಿ ಸಂಘವು (ಸಂಘ ಪರಿವಾರ) ತನ್ನನ್ನು ತಾನು ಅತ್ಯಗತ್ಯ ಭಾಗವೆಂದು ಪರಿಗಣಿಸುತ್ತದೆ. ಸಾವಯವ ವಾದವು ಅಂತರ್ಗತವಾಗಿ ಒಂದು ತೀವ್ರ ಬಲಪಂಥೀಯ ಸಿದ್ಧಾಂತವಾಗಿದೆ. ಈ ಸಿದ್ಧಾಂತದಲ್ಲಿ, ಸಮಾಜವನ್ನು ಒಂದು ನೈಸರ್ಗಿಕ, ಅವಿಭಾಜ್ಯ ಮತ್ತು ವ್ಯವಸ್ಥಿತ ಜೀವಿಯಂತೆ () ನೋಡಲಾಗುತ್ತದೆ. ಅದೇ ರೀತಿ ಅಲ್ಪಸಂಖ್ಯಾತರು ಅಥವಾ ವಿದೇಶಿಯರು ಅಸ್ವಾಭಾವಿಕರು ಮತ್ತು ಅವರನ್ನು ಹೊರಹಾಕುವುದೇ ಸೂಕ್ತ ಎಂದು ಈ ಸಿದ್ಧಾಂತ ಪ್ರತಿಪಾದಿಸುತ್ತದೆ.

ಮುಖ್ಯವಾಗಿ, ಸಮಾಜವೆಂಬ ಈ ಜೀವಿ ಅಥವಾ ದೇಹವು ರೋಗಗ್ರಸ್ತವಾಗಿದೆ ಮತ್ತು ''ರಾಷ್ಟ್ರೀಯ ಪುನರುಜ್ಜೀವನ'' ಸಾಧಿಸಲು ಅದಕ್ಕೆ ಚಿಕಿತ್ಸೆಯ ಅಗತ್ಯವಿದೆ ಎಂದು ಆಗಾಗ್ಗೆ ಕಲ್ಪಿಸಿಕೊಳ್ಳಲಾಗುತ್ತದೆ. ಸಮಾಜವು ''ಕಲುಷಿತ ರಕ್ತ''ದಿಂದ (ಪ್ರಮುಖ ಆರ್‌ಎಸ್‌ಎಸ್ ಚಿಂತಕ ಏಕನಾಥ್ ರಾನಡೆ ಅವರ ಪ್ರಕಾರ), ''ಗಾಯ''ದಿಂದ (ಚಿತ್ಕಾರ ಅವರ ಪ್ರಕಾರ) ಅಥವಾ ''ಕುರು''ಗಳಿಂದ (ಗೋಳವಲ್ಕರ್ ಪ್ರಕಾರ) ಬಳಲುತ್ತಿರಲಿ; ಅಂಗಾಂಗಗಳು, ಜೀವಕೋಶಗಳು ಮತ್ತು ಸ್ನಾಯುಗಳಿಂದ ಮಾಡಲ್ಪಟ್ಟಿರುವ ಆರ್‌ಎಸ್‌ಎಸ್‌ನ ರೋಗನಿರೋಧಕ ಗುಣಗಳಿಂದ ( ) ಮಾತ್ರ ಅದನ್ನು ಗುಣಪಡಿಸಲು ಸಾಧ್ಯ ಎಂಬುದು ಅವರ ವಾದ. ಈ ಜೀವಿಯನ್ನು (ಸಮಾಜವನ್ನು) ಶುದ್ಧೀಕರಿಸುವುದು ಮತ್ತು ನಂತರ ತಾನೇ ಆ ಜೀವಿಯಾಗಿ ಬದಲಾಗುವುದು ಸಂಘವು ಸದಾಕಾಲ ಘೋಷಿಸಿಕೊಂಡ ಬಂದಿರುವ ಸ್ಪಷ್ಟವಾದ ಗುರಿಯಾಗಿದೆ. ಹಿಂದೂಗಳ ದೌರ್ಬಲ್ಯ ಮತ್ತು ಅನೈಕ್ಯತೆ ಎಂದು ಹೇಳಲಾಗುವ ಸಂಗತಿಗಳನ್ನು ಮೀರಿ ಬೆಳೆಯಲು, ಸಂಘಟನೆಗೆ ಬದ್ಧರಾಗಿರುವುದು ಅತ್ಯಗತ್ಯ ಎಂದು ಆರ್‌ಎಸ್‌ಎಸ್ ನಾಯಕರು ದೀರ್ಘಕಾಲದಿಂದ ಪ್ರತಿಪಾದಿಸುತ್ತಿದ್ದಾರೆ. ಸಂಘದ ಪಾಲಿಗೆ, ಸಂಘಟನೆ ಎಂಬುದು ಸಾಧನವೂ ಹೌದು ಮತ್ತು ಗುರಿಯೂ ಹೌದು; ಅದುವೇ ಹಿಂದೂ ರಾಷ್ಟ್ರದತ್ತ ಸಾಗುವ ಮಾರ್ಗ.

ಆದ್ದರಿಂದ, ಈ ಸಾವಯವ ವಾದವು ಕೇವಲ ಒಂದು ರೂಪಕವಷ್ಟೇ ಅಲ್ಲ, ಇದೊಂದು ಪರಿಸರ ವ್ಯವಸ್ಥೆಯ ಮಾದರಿಯ ಸಂಘಟನಾ ತತ್ವವಾಗಿದೆ ಮತ್ತು ''ಸಂಘ್ ಸಮಾಜ್ ಬನೇಗಾ'' (ಸಂಘವೇ ಸಮಾಜವಾಗಲಿದೆ) ಎಂಬ ಸಂಘದ ಘೋಷಿತ ಗುರಿಯ ಭಾಗವಾಗಿದೆ. ವೈವಿಧ್ಯಮಯ ಸಂಸ್ಥೆಗಳನ್ನು ಹುಟ್ಟುಹಾಕುವುದು, ತನ್ನ ಏಕರೂಪದ ಸಾಂಸ್ಥಿಕ ಅಸ್ತಿತ್ವಕ್ಕೆ ( ) ಎಂದಿಗೂ ವಿರೋಧಾಭಾಸವಲ್ಲ ಎಂಬುದನ್ನು ಆರ್‌ಎಸ್‌ಎಸ್ ಅರ್ಥಮಾಡಿಕೊಂಡಿದೆ. ಆರ್‌ಎಸ್‌ಎಸ್ ನಾಯಕರು ಪದೇ ಪದೇ ಇದನ್ನು ಸ್ಪಷ್ಟಪಡಿಸಿದ್ದಾರೆ.

ಹೆಡಗೇವಾರ್ ಅವರ ಮಾತುಗಳಲ್ಲಿ: ''ಕಾಲ ಕಳೆದಂತೆ, ಆರ್‌ಎಸ್‌ಎಸ್ ಸಂಸ್ಥಾಪಕ ಡಾ. ಕೆ.ಬಿ. ಹೆಡಗೇವಾರ್ ಅವರ ನಿರ್ದೇಶನದಂತೆ, ಆರ್‌ಎಸ್‌ಎಸ್ ಸಮಾಜದ ಒಳಗಿನ ಒಂದು ಸಂಘಟನೆಯಾಗಬಾರದು, ಬದಲಾಗಿ ಅದು ಇಡೀ ಸಮಾಜದ ಸಂಘಟನೆಯಾಗಬೇಕು''.

ಗೋಳವಲ್ಕರ್ ಅವರ ಮಾತುಗಳಲ್ಲಿ: ''ಸಮಾಜದೊಳಗೆ ಒಂದು ಪ್ರತ್ಯೇಕ ಮತ್ತು ಭಿನ್ನ ಘಟಕವಾಗಿ ಸಂಘಟನೆಯನ್ನು ಕಟ್ಟುವ ಆಲೋಚನೆಯನ್ನು ಸಂಘವು ಎಂದಿಗೂ ಹೊಂದಿಲ್ಲ. ಆರಂಭದಿಂದಲೂ ಸಂಘವು ಇಡೀ ಸಮಾಜವನ್ನು ಸಂಘಟಿತ ಅಸ್ತಿತ್ವವನ್ನಾಗಿ ರೂಪಿಸುವುದನ್ನು ತನ್ನ ಗುರಿಯನ್ನಾಗಿ ಇರಿಸಿಕೊಂಡಿದೆಯೇ ಹೊರತು, ಸಮಾಜದ ಯಾವುದೋ ಒಂದು ಭಾಗವನ್ನಲ್ಲ.''

ಪ್ರಸ್ತುತ ಆರ್‌ಎಸ್‌ಎಸ್ ವಕ್ತಾರ ಸುನಿಲ್ ಅಂಬೇಕರ್ ಅವರ ಮಾತುಗಳಲ್ಲಿ: ''ಸಂಘವು ಜಾಲಗಳ ಒಂದು ಜಾಲವಾಗಿದೆ ( ). ಹಸ್ತಕ್ಷೇಪದ ಅಗತ್ಯವಿರುವ ಸಮಾಜದ ಹತ್ತು ಹಲವು ಸಮಸ್ಯೆಗಳನ್ನು ಬಗೆಹರಿಸಲು ಬೆಂಬಲ ನೀಡುವ ನಿಟ್ಟಿನಲ್ಲಿ, ಎಷ್ಟು ಬೇಕಾದರೂ ಸಂಸ್ಥೆಗಳನ್ನು ಹುಟ್ಟುಹಾಕಲು ಯಾವುದೇ ಮಿತಿಯಿಲ್ಲ.''

ವಾಸ್ತವವಾಗಿ, ಸಂಘವು ತನ್ನ ಸದಸ್ಯರನ್ನು ಉದ್ದೇಶಿಸಿ ಬರೆಯುವಾಗ, ತನ್ನ ಆಂತರಿಕ ಸಂಸ್ಥೆಗಳ ನಡುವೆ ಯಾವುದೇ ಭೇದವನ್ನು ಮಾಡುವುದಿಲ್ಲ ಎಂಬುದು ಹಲವು ಬಾರಿ ಸಾಬೀತಾಗಿದೆ. ಆರ್ಗನೈಸರ್ ಪತ್ರಿಕೆಯ ಲೇಖನವೊಂದರಲ್ಲಿ ವಿದ್ಯಾ ಭಾರತಿ ಪಂಜಾಬ್ ಹೆಸರನ್ನು ಅದರ ಅಂಗಸಂಸ್ಥೆಯಾದ ಸರ್ವಹಿತಕಾರಿ ಶಿಕ್ಷಾ ಸಮಿತಿಯೊಂದಿಗೆ ಅದಲುಬದಲು ಮಾಡಿ ಬಳಸಿರುವುದಿರಬಹುದು; ಯುಕೆ () ಯಲ್ಲಿರುವ ಹಿಂದೂ ಸ್ವಯಂಸೇವಕ ಸಂಘ () ಹೊರತಂದ ಸ್ಮರಣ ಸಂಚಿಕೆಯಲ್ಲಿ, ಸದಸ್ಯರು ನ್ಯಾಷನಲ್ ಹಿಂದೂ ಸ್ಟೂಡೆಂಟ್ಸ್ ಫೋರಂನಲ್ಲಿ ತಾವು ಮಾಡಿದ ಕೆಲಸವನ್ನು ಸಂಘದ ಕೆಲಸವೆಂದು ಹೇಳಿಕೊಂಡಿರಬಹುದು; ಆರ್‌ಎಸ್‌ಎಸ್‌ನ ಹಿರಿಯ ಚಿಂತಕ ರಾಕೇಶ್ ಸಿನ್ಹಾ ಅವರು ''ವಿದ್ಯಾ ಭಾರತಿ ನಡೆಸುತ್ತಿರುವ ಭಾರತದ ಅತಿದೊಡ್ಡ ಶಾಲಾ ಜಾಲವು ಆರ್‌ಎಸ್‌ಎಸ್‌ಗೆ ಸೇರಿದ್ದು'' ಎಂದು ಹೇಳಿಕೊಂಡಿರಬಹುದು; ಅಥವಾ ಸೇವಾ ಸಾಧನ ಪ್ರಕಟಿಸಿದ ಪಟ್ಟಿಯಲ್ಲಿ ಸಕ್ಷಮ್, ವಿಎಚ್‌ಪಿ, ವಿದ್ಯಾ ಭಾರತಿ, ವನವಾಸಿ ಕಲ್ಯಾಣ ಆಶ್ರಮ, ಭಾರತ ವಿಕಾಸ ಪರಿಷತ್, ರಾಷ್ಟ್ರ ಸೇವಿಕಾ ಸಮಿತಿ, ಎಬಿವಿಪಿ ಮತ್ತು ದೀನದಯಾಳ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಇವೆಲ್ಲವನ್ನೂ ''ರಾಷ್ಟ್ರೀಯ ಸ್ವಯಂಸೇವಕ ಸಂಘ: ಸೇವಾ ವಿಭಾಗ'' ಎಂಬ ಒಂದೇ ಶೀರ್ಷಿಕೆಯಡಿ ತಂದಿರಬಹುದು.

ಇಡೀ ಸಂಘದ ಜಾಲವನ್ನು ಒಂದೇ ಸಾಂಸ್ಥಿಕ ಘಟಕವಾಗಿ ಗ್ರಹಿಸಿದಾಗ, ಅದನ್ನು ಅರ್ಥಮಾಡಿಕೊಳ್ಳುವ ಹೊಸ ಮಾರ್ಗಗಳು ಗೋಚರಿಸುತ್ತವೆ. ಈ ಯೋಜನೆಗಾಗಿ, ನಾನು 2022ರಲ್ಲಿ ಕಾಂಟೆಂಪರರಿ ಸೌತ್ ಏಷ್ಯಾ ( ) ಜರ್ನಲ್‌ಗಾಗಿ ಬರೆದ ಲೇಖನದಲ್ಲಿ ಪ್ರಸ್ತಾಪಿಸಿದ ವ್ಯಾಖ್ಯಾನವನ್ನೇ ನಮ್ಮ ತಂಡವು ಅನುಸರಿಸಿದೆ. ಆ ವ್ಯಾಖ್ಯಾನದ ಪ್ರಕಾರ ಸಂಘವೆಂದರೆ, ''ಯಾವುದೇ ಬಲವಂತವಿಲ್ಲದೆ ( ) ಮತ್ತು ಅಸ್ತಿತ್ವದಲ್ಲಿರುವ ಸಾಂಸ್ಥಿಕ ಸಂವಹನ ವಾಹಿನಿಗಳ ಮೂಲಕ, ಸಂಘದ ಕೇಂದ್ರ ನಾಯಕತ್ವವು ಅಧಿಕಾರ ಚಲಾಯಿಸಬಲ್ಲ ಸಾಂಸ್ಥಿಕ ನೆಲೆಗಳ ಒಂದು ಸಮೂಹ''. ಈ ಜಾಲ-ಕೇಂದ್ರಿತ (-) ವಿಧಾನವು, ಕೇವಲ ಹಿಂದುತ್ವವನ್ನು ಪ್ರತಿಪಾದಿಸುವ ಸಂಸ್ಥೆಗಳ ನಕ್ಷೆಯನ್ನು ತಯಾರಿಸುವುದಕ್ಕಿಂತ ಭಿನ್ನವಾಗಿ, ಸಂಘದ ಒಂದು ನಿರ್ದಿಷ್ಟ ಭೌತಿಕ ಮತ್ತು ಸಾಂಸ್ಥಿಕ ಜಾಲದ ನಕ್ಷೆಯನ್ನು ರೂಪಿಸಲು ಕರೆ ನೀಡಿತು.

ಮೇಲೆ ಪ್ರಸ್ತಾಪಿಸಿದಂತೆ, ಈ ಚಳವಳಿಗಳಲ್ಲಿ ಭಾಗವಹಿಸುವವರನ್ನು ಗುರುತಿಸಲು ಅಥವಾ ಅವರ ಕಾರ್ಯ ವೈಖರಿಯನ್ನು ಅರ್ಥ ಮಾಡಿಕೊಳ್ಳಲು, ಕೇವಲ ತೀವ್ರ ಬಲಪಂಥೀಯ ಸೈದ್ಧಾಂತಿಕ ಬದ್ಧತೆಯ ಅಭಿವ್ಯಕ್ತಿಗಳನ್ನು ಮಾನದಂಡವನ್ನಾಗಿ ( ) ಪರಿಗಣಿಸುವುದು ಸಾಲದು. ಉದಾಹರಣೆಗೆ, ವೇದ್ ಮಂದಿರ ಸಂಕೀರ್ಣದಲ್ಲಿರುವ ಬಹುತೇಕ ಸಂಸ್ಥೆಗಳನ್ನು ಕೇವಲ ಗೋಚರವಾಗುವ ತೀವ್ರ ಬಲಪಂಥೀಯ ಸೈದ್ಧಾಂತಿಕ ಬದ್ಧತೆಯ ಒರೆಗಲ್ಲಿಗೆ ಹಚ್ಚಿ ನೋಡಿದರೆ ಅವು ಉತ್ತೀರ್ಣರಾಗಲಾರವು. ಆದರೆ, ಅವೆಲ್ಲವೂ ಸ್ವಇಚ್ಛೆಯಿಂದಲೇ ಹಾಗೂ ನಿರ್ದಿಷ್ಟ ಆಡಳಿತಾತ್ಮಕ ಮತ್ತು ಸಾಂಸ್ಥಿಕ ಜಾಲಗಳ ಮೂಲಕ ಆರ್‌ಎಸ್‌ಎಸ್ ನಾಯಕತ್ವದ ಅಧಿಕಾರಕ್ಕೆ ಒಳಪಟ್ಟಿವೆ ಎಂಬುದು ವಾಸ್ತವ.

ಸೈದ್ಧಾಂತಿಕ ನಿಲುವುಗಳುಅವು ಬಹಿರಂಗವಾಗಿ ವ್ಯಕ್ತಪಡಿಸಿದ್ದಾಗಿರಲಿ ಅಥವಾ ಆಂತರಿಕವಾಗಿ ನಂಬಿದ್ದಾಗಿರಲಿತೀವ್ರ, ಬಲಪಂಥೀಯ ಸಂಘಟನೆಯನ್ನು () ವಿಶ್ವಾಸಾರ್ಹವಾಗಿ ಗುರುತಿಸಲು ವಿಫಲವಾದಾಗ, ನಮ್ಮ ಗಮನವನ್ನು ಅನಿವಾರ್ಯವಾಗಿ ಭೌತಿಕ ಸಂಬಂಧಗಳ ಕಡೆಗೆ ಹರಿಸಬೇಕಾಯಿತು. ಸಂಘದ ದಾಖಲೆಗಳನ್ನೇ ಪ್ರಮುಖ ಆಧಾರವನ್ನಾಗಿ ಇಟ್ಟುಕೊಂಡು; ಮಾನವ ಸಂಪನ್ಮೂಲ, ಭೌತಿಕ ಆಸ್ತಿಗಳು, ಹಣಕಾಸು ಮತ್ತು ಆಡಳಿತಾತ್ಮಕ ನಿರ್ವಹಣೆಯ ಮೇಲೆ ನಾವು ನಮ್ಮ ಗಮನವನ್ನು ಕೇಂದ್ರೀಕರಿಸಿದೆವು.

ಆರ್‌ಎಸ್‌ಎಸ್ ಅಧಿಕೃತವಾಗಿ ಒಪ್ಪಿಕೊಂಡಿರುವ ಮೂರು ಡಜನ್ ಸಂಘಟನೆಗಳಿಂದಲೇ ನಮ್ಮ ಕಾರ್ಯವನ್ನು ಆರಂಭಿಸಿದೆವು. ಹೆಚ್ಚುವರಿ ಸಂಸ್ಥೆಗಳನ್ನು ಗುರುತಿಸುವ ಸಲುವಾಗಿ, ಈ ಘಟಕಗಳು ಸೃಷ್ಟಿಸಿರುವ ಸಾಂಸ್ಥಿಕ ದಾಖಲೆಗಳು, ಆತ್ಮಚರಿತ್ರೆಗಳು, ಬ್ಲಾಗ್‌ಗಳು ಮತ್ತು ಸಾಮಾಜಿಕ ಜಾಲತಾಣದ ಪೋಸ್ಟ್‌ಗಳಂತಹ ಬೃಹತ್ ಮಾಹಿತಿಯ ಕಣಜವನ್ನೇ ನಮ್ಮ ತಂಡ ಜಾಲಾಡಿತು. ವಿವಾದಾತ್ಮಕ ಬರಹಗಳು, ಅತ್ಯಂತ ನೀರಸವಾದ ಸಾಂಸ್ಥಿಕ ಆತ್ಮಚರಿತ್ರೆಗಳು ಮತ್ತು ಅನೇಕ ಬಾರಿ ಹಸಿ ಸುಳ್ಳುಗಳ ರಾಶಿಯನ್ನೇ ಶೋಧಿಸಿ, ಅವುಗಳ ನಡುವಿನಿಂದ ಉಪಯುಕ್ತ ಮಾಹಿತಿಯ ಸಣ್ಣ ತುಣುಕುಗಳನ್ನು ಹುಡುಕಿ ತೆಗೆಯುವುದು ನಮ್ಮ ಮುಂದಿದ್ದ ಸವಾಲಾಗಿತ್ತು. ಈ ಪ್ರಕ್ರಿಯೆಯು ಸಂಘದ ಸಂಭಾವ್ಯ ಸಂಸ್ಥೆಗಳೆಂದು ಪರಿಗಣಿಸಬಹುದಾದ ದ್ವಿತೀಯ ಸ್ತರದ ಸಂಸ್ಥೆಗಳ ಪಟ್ಟಿಯೊಂದನ್ನು ನೀಡಿತು. ಆದರೆ, ಸಂಘದ ಮೂಲಗಳಲ್ಲಿ ಸಿಕ್ಕ ಮಾಹಿತಿಯನ್ನು ಶೈಕ್ಷಣಿಕ ಸಾಹಿತ್ಯ, ಹಣಕಾಸು ವರದಿಗಳು, ಸರ್ಕಾರಿ ದಾಖಲೆಗಳು ಮತ್ತು ಸಂಘದ ಇತರೆ ಆಕರಗಳೊಂದಿಗೆ ತಾಳೆ ನೋಡುವ ( ) ಮೂಲಕ ಖಚಿತಪಡಿಸಿಕೊಂಡ ನಂತರವೇ ಈ ಪಟ್ಟಿಯನ್ನು ಅಂತಿಮಗೊಳಿಸಲಾಯಿತು. (ಸಂಶೋಧಕರು ಸಂಗ್ರಹಿಸಿದ ಪ್ರತಿಯೊಂದು ದತ್ತಾಂಶವನ್ನೂ ಸಾರ್ವಜನಿಕವಾಗಿ ಲಭ್ಯವಿರುವ ಮೂಲಗಳಿಂದಲೇ ಪಡೆಯಲಾಗಿತ್ತು ಮತ್ತು ಸಂಘದ ಸ್ವಂತ ದಾಖಲೆಗಳಿಗೇ ನಮ್ಮ ಅಧ್ಯಯನದಲ್ಲಿ ಕೇಂದ್ರ ಸ್ಥಾನವನ್ನು ನೀಡಲಾಗಿತ್ತು).

ಸಂಭಾವ್ಯ ಸಂಸ್ಥೆಗಳಿಂದ ಖಚಿತ ಸಂಸ್ಥೆಗಳ ಹಂತಕ್ಕೆ ತಲುಪಲು, ನಾವು ಒಂದು ಪ್ರಮಾಣೀಕೃತ ಮಾನದಂಡವನ್ನು ಅಭಿವೃದ್ಧಿಪಡಿಸಿದೆವು. ಅಂದರೆ, ಸಂಸ್ಥೆಯೊಂದನ್ನು ಪ್ರತ್ಯೇಕವಾಗಿ ಅಥವಾ ಒಂಟಿಯಾಗಿ ಮೌಲ್ಯಮಾಪನ ಮಾಡುವುದಲ್ಲ; ಅದರ ಬದಲಿಗೆ ಸಂಘದ ಸಂಪರ್ಕ ಜಾಲದೊಳಗೆ ( ) ಅದು ಹೊಂದಿಕೊಳ್ಳುತ್ತದೆಯೇ, ಹಾಗಿದ್ದರೆ ಹೇಗೆ ಮತ್ತು ಎಷ್ಟರ ಮಟ್ಟಿಗೆ ಎಂಬ ಆಧಾರದ ಮೇಲೆ ಅದನ್ನು ನಿರ್ಧರಿಸಲಾಯಿತು. ನಾವು ಆಯಾ ಸಂಸ್ಥೆಗಳ ಹೇಳಿಕೆಗಳು ಮತ್ತು ಚಟುವಟಿಕೆಗಳಿಗಿಂತ ಹೆಚ್ಚಾಗಿ; ಅವು ಹಂಚಿಕೊಂಡಿರುವ ಸಿಬ್ಬಂದಿ, ಕಚೇರಿಗಳು, ಜಂಟಿಯಾಗಿ ಆಯೋಜಿಸಿದ ಕಾರ್ಯಕ್ರಮಗಳು ಮತ್ತು ಹಣಕಾಸಿನ ಹರಿವಿನ ಮೇಲೆ ಹೆಚ್ಚು ಗಮನ ಕೇಂದ್ರೀಕರಿಸಿದೆವು. ಏಕೆಂದರೆ, ಬಹಿರಂಗವಾಗಿ ಒಪ್ಪಿಕೊಳ್ಳದ ಈ ನಂಟುಗಳೇ ಸಂಘದ ಜಾಲವನ್ನು ವ್ಯಾಖ್ಯಾನಿಸುವ ಅಂತರ-ಸಾಂಸ್ಥಿಕ ಸಂಬಂಧಗಳ ತಿರುಳಾಗಿವೆ.

ಫರಿದಾಬಾದ್‌ನ ದೋನಿ ಪೋಲೊ ಛಾತ್ರಾವಾಸ್ ಅನ್ನು ಪರಿಶೀಲಿಸಿದಾಗ, ಅದರ ಆವರಣದಲ್ಲಿ ಗೋಳವಲ್ಕರ್ ಮತ್ತು ಹೆಡ್ಗೇವಾರ್ ಫೋಟೋಗಳು ಕಂಡವು. ಹಾಸ್ಟೆಲ್‌ನ ಕೊಠಡಿಗಳಿಗೆ ಸಂಘದ ಪ್ರಮುಖ ವ್ಯಕ್ತಿಗಳ ಹೆಸರು ಇರಿಸಲಾಗಿತ್ತು ಮತ್ತು ಹತ್ತಿರದ ಆಟದ ಮೈದಾನದಲ್ಲಿ ಶಾಖಾ ಚಟುವಟಿಕೆಗಳನ್ನು ನಡೆಸಲಾಗುತ್ತಿತ್ತು. ವನವಾಸಿ ಕಲ್ಯಾಣ ಆಶ್ರಮದ ಹರಿಯಾಣ ಪ್ರಧಾನ ಕಚೇರಿ ಎಂದು ಪಟ್ಟಿ ಮಾಡಲಾದ ವಿಳಾಸದಿಂದಲೇ ಇದು ಕಾರ್ಯನಿರ್ವಹಿಸುತ್ತಿತ್ತು.


ಅದೇ ರೀತಿ, ಮಲೇಷ್ಯಾದಲ್ಲಿ ಮೇಲ್ನೋಟಕ್ಕೆ ನಿರುಪದ್ರವಿಯಂತೆ ಕಾಣುವ ಹಿಂದೂ ಸೇವೈ ಸಂಗಮ್ ತನ್ನ ಪ್ರಕಟಣೆಗಳಲ್ಲಿ ಕಾರ್ಯವಾಹ ಮತ್ತು ಸಹ ಸಂಘಚಾಲಕನಂತಹ ಸಂಘದ ನಿರ್ದಿಷ್ಟ ಶೀರ್ಷಿಕೆಗಳನ್ನು ಬಳಸುತ್ತಿದ್ದುದು ಅನುಮಾನ ಹುಟ್ಟುಹಾಕಿತು, ತಮಿಳು ಭಾಷಿಕರೇ ಹೆಚ್ಚಿನ ಸಂಖ್ಯೆಯಲ್ಲಿರುವ ಇಲ್ಲಿ ಈ ಪದಗಳು ವಿಚಿತ್ರವೆನಿಸುತ್ತಿದ್ದವು. ಹೆಚ್ಚಿನ ಹುಡುಕಾಟ ನಡೆಸಿದಾಗ, ಗೋಳವಲ್ಕರ್ ಅವರ ಉಲ್ಲೇಖಗಳು ಮತ್ತು ಆರ್‌ಎಸ್‌ಎಸ್ ಶೈಲಿಯ ಶಾಖೆಗಳನ್ನು ಹೋಲುವ ಫೋಟೋಗಳು ಕಂಡುಬಂದವು. ಅಂತಿಮವಾಗಿ, ಈ ಹಿಂದೂ ಸೇವೈ ಸಂಗಮ್ ಬೇರೇನೂ ಅಲ್ಲ, ಅದು ಹಿಂದೂ ಸ್ವಯಂಸೇವಕ ಸಂಘದ () ಮಲೇಷ್ಯಾ ಅವತಾರ ಎಂದು ನಾವು ತೀರ್ಮಾನಿಸಿದೆವು.

ಗೋಳವಲ್ಕರ್ ಅವರ ಆಪ್ತ ಸಹಾಯಕರ ಹೆಸರಿನಲ್ಲಿರುವ ಡಾ. ಆಬಾಜಿ ಥತ್ತೆ ಸೇವಾ ಮತ್ತು ಅನುಸಂಧಾನ ಸಂಸ್ಥೆ ನಮ್ಮ ಗಮನ ಸೆಳೆಯಿತು. ಇದನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಸಂಘದ ನಂಟು ಸ್ಪಷ್ಟವಾಯಿತು. ಇದರ ಪ್ರಧಾನ ಕಾರ್ಯದರ್ಶಿ ಶೈಲೇಶ್ ಜೋಗ್ಲೇಕರ್ ಒಬ್ಬ ಆರ್‌ಎಸ್‌ಎಸ್ ಸದಸ್ಯರಾಗಿದ್ದು, ಇವರು ಹಿಂದೆ ಬಜರಂಗದಳದ ವಿದರ್ಭ ಘಟಕದ ಅಧ್ಯಕ್ಷರಾಗಿದ್ದರು. ಇವರು ಭೋಂಸಲಾ ಮಿಲಿಟರಿ ಶಾಲೆಯ ಸಂಸ್ಥಾಪಕರಲ್ಲಿ ಒಬ್ಬರು. ಸಂಘದ ನಾಯಕರೂ ಆಗಿರುವ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಮತ್ತು ಮಹಾರಾಷ್ಟ್ರದ ಉಪಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಇಬ್ಬರೂ ಅದರ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ ಎಂದು ತಿಳಿದು ಬಂತು. ಈ ಸಾಕ್ಷ್ಯಗಳು, ಈ ಸಂಸ್ಥೆಯು ಸಂಘದ ಜಾಲದೊಳಗೆ ದೃಢವಾಗಿ ಹುದುಗಿಕೊಂಡಿರುವುದನ್ನು ಖಚಿತಪಡಿಸಿದವು.

ಅನುವಾದ ಮಾಲಿಕೆ 3 ಸಂಘದ ಕಣ್ಕಟ್ಟು ಅಥವಾ ಮರೆಮಾಚುವ ತಂತ್ರಗಳನ್ನು ( ) ದಾಟಿ ನೋಡಬೇಕಿದೆ

ಸಂಘದ ಪ್ರಕಟಿತ ಸಾಹಿತ್ಯದ ಆಳವಾದ ಮತ್ತು ಸಮಗ್ರ ಅಧ್ಯಯನದ ಆಧಾರದ ಮೇಲೆ, ನಮ್ಮ ತಂಡವು ಆರ್‌ಎಸ್‌ಎಸ್ ಜಾಲದ ಸದಸ್ಯತ್ವವನ್ನು ಗುರುತಿಸಲು ನೆರವಾಗುವ ಸಾಮಾನ್ಯ ಮಾದರಿಗಳ ಪಟ್ಟಿಯೊಂದನ್ನು ಸಿದ್ಧಪಡಿಸಿತು. ಈ ಪಟ್ಟಿಯನ್ನು ಮತ್ತಷ್ಟು ಪರಿಷ್ಕರಿಸಲು, ಭಾರತದ ವಿದ್ವಾಂಸರು, ಪತ್ರಕರ್ತರು ಮತ್ತು ತಳಮಟ್ಟದ ಹೋರಾಟಗಾರರೊಂದಿಗೆ ಸುಮಾರು ಎರಡು ವರ್ಷಗಳ ಕಾಲ ಸಮಾಲೋಚನೆ ನಡೆಸಲಾಯಿತು. ಈ ತಜ್ಞರು ತಮ್ಮ ವೃತ್ತಿಜೀವನದಲ್ಲಿ ಗಮನಿಸಿದ, ಸಂಘದೊಂದಿಗೆ ಹಾಸುಹೊಕ್ಕಾಗಿರುವ ಸಂಬಂಧವನ್ನು ದೃಢಪಡಿಸುವ ವಿವಿಧ ಸಾಕ್ಷ್ಯಗಳ ವಿವರಗಳನ್ನು ನಮ್ಮೊಂದಿಗೆ ಹಂಚಿಕೊಂಡರು.

ಸಿರುಗುಪ್ಪ: ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆಗೆ ಉಚಿತ ಪುಸ್ತಕ ವಿತರಣೆ ಬದುಕಿಗೆ ಓದು ಮಾರ್ಗದರ್ಶಿ ಬಿಇಓ ಗುರಪ್ಪ



ಸಿರುಗುಪ್ಪ,ಜ.02-

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ದಗೊಳ್ಳುವ ಮಕ್ಕಳಿಗೆ ಪುಸ್ತಕಗಳು ಉತ್ತಮ ಮಾರ್ಗದರ್ಶಿಯಾಗಿವೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್ ಗುರಪ್ಪ ಹೇಳಿದರು ಸಿರುಗುಪ್ಪ ತಾಲೂಕು ತೆಕ್ಕಲಕೋಟೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಎಸ್ ನರೇಂದ್ರ ಸಿಂಹ ಫ್ರೆಂಡ್ಸ್ ಫೌಂಡೇಶನ್ ನಿಂದ ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ದತೆಗೆ ಉಚಿತ ಪುಸ್ತಕ ವಿತರಿಸಿ ಅವರು ಕಾರ್ಯಕ್ರಮದಲ್ಲಿ ಮಾತನಾಡಿದರು ತೆಕ್ಕಲಕೋಟೆ ಪಟ್ಟಣದಲ್ಲಿ 11 ಸರ್ಕಾರಿ ಶಾಲೆಯ 250 ಮಕ್ಕಳಿಗೆ 75,000 ರೂ ಮೌಲ್ಯದ ಪುಸ್ತಕಗಳನ್ನು ವಿತರಿಸಲಾಯಿತು ಸರಕಾರ ಮುರಾರ್ಜಿ ದೇಸಾಯಿ ಕಿತ್ತೂರು ರಾಣಿ ಚೆನ್ನಮ್ಮ ನವೋದಯ ಹಾಗೂ ಪ್ರತಿಷ್ಠಿತ ಶಾಲೆಗಳ ಆರನೇ ತರಗತಿ ಪ್ರವೇಶಕ್ಕೆ ಪ್ರವೇಶ ಪರೀಕ್ಷೆಗಳು ನಡೆಸುತ್ತಿದ್ದು ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ ಅಂತಹ ಪರೀಕ್ಷೆಗಳಲ್ಲಿ ಸರಕಾರಿ ಶಾಲೆ ವಿದ್ಯಾರ್ಥಿಗಳಿಗೆ ಈ ಪುಸ್ತಕಗಳು ಉಪಯುಕ್ತವಾಗಲಿದೆ ಶಿಕ್ಷಕರ ಮಾರ್ಗದರ್ಶನದಲ್ಲಿ ಪುಸ್ತಕಗಳ ಸದ್ಬಳಕೆ ಮಾಡಿಕೊಂಡು ಪರೀಕ್ಷೆಗಳಲ್ಲಿ ತೇರ್ಗಡೆ ಯಾಗುವ ಜೊತೆಗೆ ಜ್ಞಾನ ಹೆಚ್ಚಿಸಿಕೊಳ್ಳ ಬೇಕು ಎಂದು ಅವರು ಕರೆ ನೀಡಿದರು ಕ್ಷೇತ್ರ ಸಂಪನ್ಮೂಲ ಶಿಕ್ಷಣ ಸಮನ್ವಯಾಧಿಕಾರಿ ತಮ್ಮನ ಗೌಡ ಪಾಟೀಲ್ ಸಾಕ್ಷರತಾ ಅಬ್ದುಲ್ ನಬಿ ಉಪನ್ಯಾಸಕರಾದ ದೊಡ್ಡಬಸಪ್ಪ ಶ್ರೀಕುಮಾರ್ ಎನ್ ಎಸ್ ಎಫ್ ಫೌಂಡೇಶನ್ ಅಧ್ಯಕ್ಷರು ಎಸ್ ನರೇಂದ್ರ ಸಿಂಹ ಬಿ ಆರ್ ಪಿ ಗಜೇಂದ್ರ ಮುಖ್ಯ ಶಿಕ್ಷಕ ಚಂದ್ರಶೇಖರ ಉಸ್ಮಾನ್ ಪಟೇಲ್ ಎಸ್ ಡಿ ಎಂ ಸಿ ಅಧ್ಯಕ್ಷ ಬಾವಿಕಟ್ಟೆ ರಾಜ ಡಣಾಪುರ ಮಲ್ಲಿಕಾರ್ಜುನ ಪಟ್ಟಣ ಪಂಚಾಯತ್ ಮಾಜಿ ಸದಸ್ಯ ನಸರುದ್ದೀನ್ ರಾಮು ವಿಶ್ವನಾಥ ಮುದುಕಪ್ಪ ಮತ್ತಿತರರು ಇದ್ದರು.

ಉತ್ತರ ಪ್ರದೇಶ ಅತ್ಯಾಚಾರಕ್ಕೆ ಯತ್ನಿಸಿದ ವ್ಯಕ್ತಿಯ ಹತ್ಯೆ; ಯುವತಿಯ ಬಂಧನ

ಅತ್ಯಾಚಾರ ನಡೆಸಲು ಯತ್ನಿಸಿದ ವ್ಯಕ್ತಿಯನ್ನು ಹತ್ಯೆ ಮಾಡಿದ ಆರೋಪದ ಮೇಲೆ 18 ವರ್ಷದ ಯುವತಿಯನ್ನು ಪೊಲೀಸರು ಬಂಧಿಸಿರುವ ಘಟನೆ ಉತ್ತರ ಪ್ರದೇಶದ ಬಂಡಾ ಜಿಲ್ಲೆಯಲ್ಲಿ ನಡೆದಿದೆ. ಗುರುವಾರ ಮಧ್ಯಾಹ್ನ ಮುರ್ವಾಲ್ ಗ್ರಾಮದಲ್ಲಿ ಯುವತಿ ತನ್ನ ಮೇಲೆ ಅತ್ಯಾಚಾರ ಮಾಡಲು ಬಂದ ವ್ಯಕ್ತಿಯ ಕೊಲೆ ಮಾಡಿದ್ದಾರೆ.

ಮಧ್ಯಾಹ್ನ 3.30ರ ಸುಮಾರಿಗೆ ಸುಖರಾಜ್ ಪ್ರಜಾಪತಿ (50) ಮೃತದೇಹವು ಮನೆಯಲ್ಲಿ ಪತ್ತೆಯಾಗಿದೆ ಎಂದು ಸ್ಟೇಷನ್ ಹೌಸ್ ಆಫೀಸರ್ (ಎಸ್‌ಎಚ್‌ಒ) ರಾಜೇಂದ್ರ ಸಿಂಗ್ ರಾಜವತ್ ಹೇಳಿದ್ದಾರೆ. ಮೃತ ವ್ಯಕ್ತಿಯ ಕುಟುಂಬ ಸದಸ್ಯರು ನೀಡಿದ ದೂರಿನ ಆಧಾರದ ಮೇಲೆ ಪೊಲೀಸರು ಯುವತಿಯನ್ನು ಬಂಧಿಸಿದ್ದಾರೆ ಎಂದೂ ತಿಳಿಸಿದ್ದಾರೆ.

ವಿಚಾರಣೆಯ ವೇಳೆ ''ಆ ವ್ಯಕ್ತಿ ನನ್ನ ಮನೆಗೆ ನುಗ್ಗಿ ಅತ್ಯಾಚಾರಕ್ಕೆ ಯತ್ನಿಸಿದ ಈ ವೇಳೆ ನನ್ನನ್ನು ನಾನು ರಕ್ಷಿಸಿಕೊಳ್ಳಲು ಮನೆಯಲ್ಲಿದ್ದ ಹರಿತ ಆಯುಧದಿಂದ ಹೊಡೆದೆ. ಇದರಿಂದಾಗಿ ಆತ ಮೃತಪಟ್ಟ'' ಎಂದು ಯುವತಿ ಹೇಳಿದ್ದಾಳೆ.

ಕಾನೂನು ಹೇಳುವುದೇನು?

ಪ್ರಸ್ತುತ ಜಾರಿಯಲ್ಲಿರುವ ಭಾರತೀಯ ನ್ಯಾಯ ಸಂಹಿತೆ () ಯಡಿಯಲ್ಲಿ ಮಹಿಳೆಯು ತನ್ನ ರಕ್ಷಣೆಗಾಗಿ ಎದುರಾಳಿಯ ಮೇಲೆ ದಾಳಿ ಮಾಡಿದಾಗ ಎದುರಾಳಿ ಮೃತಪಟ್ಟರೆ ಅದನ್ನು ಕೊಲೆ ಎಂದು ಪರಿಗಣಿಸಲಾಗುವುದಿಲ್ಲ. ಆತ್ಮರಕ್ಷಣೆ ಅಥವಾ ಇತರರ ರಕ್ಷಣೆಗಾಗಿ ಮಾಡುವ ಹತ್ಯೆಯನ್ನು ಸಮರ್ಥನೀಯ ನರಹತ್ಯೆ ( ) ಎಂದು ಪರಿಗಣಿಸಲಾಗುತ್ತದೆ. ಲೈಂಗಿಕ ದೌರ್ಜನ್ಯ ಅಥವಾ ಅತ್ಯಾಚಾರದ ಪ್ರಯತ್ನ ನಡೆದಾಗ, ಆಸಿಡ್ ಎಸೆಯುವ ಅಥವಾ ಆಸಿಡ್ ಹಾಕಲು ಯತ್ನಿಸುವ ಸಂದರ್ಭದಲ್ಲಿ ತನ್ನನ್ನು ತಾನು ರಕ್ಷಿಸಲು ಎದುರಾಳಿಯ ಮೇಲೆ ದಾಳಿ ನಡೆಸುವುದು ಅಪರಾಧವಾಗುವುದಿಲ್ಲ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR